MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

YUVA MARGA KANNADA DAILY NEWS PAPER


ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 04 | ಸಂಚಿಕೆ: 214 | ರವಿವಾರ : 08-06-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 214 | SUNDAY : 08-06-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಕಾಡುವ ಪಾತ್ರಗಳು ಕನ್ನಡ ಕಂಪು ಸೀಸ್ ಕಡ್ಡಿಯ ವಿಭಿನ್ನ ಕಥೆ



ಕಂಟೆಂಟ್ ಓರಿಯೆಂಟೆಡ್ ಸಿನಿಮಾಗಳು ಬೇಕು ಬೇಕು ಎಂದು ಹಂಬಲಿಸುವವರು ಸೀಸ್ ಕಡ್ಡಿಯನ್ನ ನೋಡಬೇಕು. ಗ್ರಹಣ ಪ್ರೊಡಕ್ಷನ್ ನಡಿಯಲ್ಲಿ ರತನ್ ಗಂಗಾಧರ್ ನಿರ್ದೇಶನ ಮಾಡಿರುವ ಸೀಸ್ ಕಡ್ಡಿ ಸಿನಿಮಾದಲ್ಲಿ ರೇಖಾ ಕೂಡ್ಲಗಿ, ಸೌಮ್ಯ ಜಗನ್ ಮೂರ್ತಿ, ರಾಘವೇಂದ್ರ ಭಟ್, ನಾಗರಾಜ್ ರಾವ್ ನಟಿಸಿದ್ದಾರೆ. ರತನ್ ಗಂಗಾಧರ್ ಒಂದೊಳ್ಳೆ ಕಂಟೆಂಟ್ ಅನ್ನು ಇಟ್ಟುಕೊಂಡು ಅಚ್ಚುಕಟ್ಟಾಗಿ ತೆರೆಮೇಲೆ ತಂದಿದ್ದಾರೆ.

# ಬೆಟ್ಟಿಂಗ್ ದಂಧೆ ಕಡಿವಾಣಕ್ಕೆ ಕ್ರಮ ಕೈಗೊಳ್ಳಿ : ಬಸವರಾಜ ಪಾಟೀಲ್ ಅನ್ವರಿ

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜೂ.7–** ಕ್ರಿಕೆಟ್ ಬೆಟ್ಟಿಂಗ್ ಹಾವಳಿ ಹೆಚ್ಚಾಗಿದ್ದು ಇದರಿಂದ ಯುವ ಜನತೆ ಹಾಳಗುತ್ತಿದ್ದು ಕೂಡಲೇ ರಾಜ್ಯ ಮತ್ತು ಕೇಂದ್ರ ಸರ್ಕಾರ ಬೆಟ್ಟಿಂಗ್ ದಂಧೆಕ್ಕೆ ಕಡಿವಾಣ ಹಾಕಬೇಕೆಂದು ಮಾಜಿ ಸಚಿವ ಬಸವರಾಜ ಪಾಟೀಲ್ ಆನ್ವರಿ ಹೇಳಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆನ್ಲೈನ್ ಬೆಟ್ಟಿಂಗ್ ಯಿಂದ ಯುವ ಸಮೂಹ ದಾರಿ ತಪ್ಪುತ್ತಿದ್ದು ಇದನ್ನು ಮನಕೊಂಡು ಸರ್ಕಾರ ಬ್ಯಾನ್ ಮಾಡಬೇಕು ಅಂದಾಗ ಮಾತ್ರ ಯುವ ಜನಾಂಗ ತಪ್ಪು ದಾರಿ ಹಿಡಿಯುದಿಲ್ಲ ಎಂದರು.

**ಕ್ರಿಕೆಟ್ ಆಟ ಇಸ್ಪೀಟು ಆಟವಾಗಿದೆ :** ಕ್ರಿಕೆಟ್ ಆಟವನ್ನು ಇಂದಿನ ಯುವ ಜನತೆ ಇಸ್ಪೀಟು ಆಟದಂತೆ ವರ್ತಿಸುತ್ತಿದ್ದಾರೆ ಬಾಲ್ ಗೆ, ರನ್ ಗೆ, ವಿಕೆಟ್ ಗೆ ಬೆಟ್ಟಿಂಗ್ ಆಡಿ ಅದನ್ನು ಇಸ್ಪೀಟು ಆಟದಂತೆ ಮಾಡಿಕೊಂಡು ಹಾಳಗುತ್ತಿದ್ದಾರೆ ಕೂಡಲೇ ರಾಜ್ಯ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಿ ಬೆಟ್ಟಿಂಗ್ ಹಾವಳಿ ತಡೆದರೆ ಯುವ ಪೀಳಿಗೆಗೆ ಅನುಕೂಲವಾಗುತ್ತದೆ ಎಂದುರು.



ಹನ್ನೊಂದು ಜನ ಸಾವಿಗೆ ಕಾರಣ ಯಾರು ಎನ್ನುವುದು ರಾಜ್ಯ ಸರ್ಕಾರಕ್ಕೆ ಗೊತ್ತಿಲ್ಲ, ಇದರ ಹೊಣೆ ಯಾರಿಗೂ ಹಾಕದೆ ಪೋಲಿಸ್ ರನ್ನು ಅಮಾನತು ಮಾಡಿದ ಸರ್ಕಾರ, ಪೋಲಿಸ್ ಕಮಿಷನ್ ರನ್ನು ಅಮಾನತು ಮಾಡಿದ ಮೊದಲ ಸರ್ಕಾರ ಇದಾಗಿದೆ ಎಂದು ವ್ಯಂಗ್ಯವಾಗಿ ಹೇಳಿದರು.

**ಲಿಂಗಸುಗೂರು ರಾಜಕೀಯ ನಾಯಕರ ರಾಜಕೀಯ ಹಿತಾಸಕ್ತಿ ಕೊರತೆ :** ಲಿಂಗಸುಗೂರಿಗೆ ಮಂಜೂರಾದ ಜಿಲ್ಲಾ ಆಸ್ಪತ್ರೆ ಸಿಂಧನೂರುಗೆ ವರ್ಗಾವಣೆ ಮಾಡಲಿಕ್ಕೆ ಲಿಂಗಸುಗೂರು ರಾಜಕೀಯ ನಾಯಕರ ಹಿತಾಸಕ್ತಿಕೊರತೆ ಎದ್ದುಕಾಣುತ್ತದೆ. ಈ ಸಂದರ್ಭದಲ್ಲಿ ಶರಣಪ್ಪ ಗೋನವಾರ, ಶೋಹಿಲ್ ಸಾಬ್ ಸೇರಿದಂತೆ ಇದ್ದರು.

# ರಾಜ್ಯದಲ್ಲಿ ಜೂ.9 ರಿಂದ ಮತ್ತೊಂದು ಸುತ್ತಿನ ಮಳೆ

**ಬೆಂಗಳೂರು, ಜೂ.7–** ರಾಜ್ಯದಲ್ಲಿ ಕಳೆದ 8–10 ದಿನಗಳಿಂದ ದುರ್ಬಲಗೊಂಡಿದ್ದ ನೈರುತ್ಯ ಮುಂಗಾರು ಮತ್ತೆ ಚೇತರಿಸಿಕೊಂಡಿದೆ. ರಾಜ್ಯದಲ್ಲಿ ಮತ್ತೊಂದು ಸುತ್ತಿನ ಮಳೆ ಆರಂಭವಾಗಲಿದೆ. ಇಂದಿನಿಂದ ರಾಜ್ಯದ ಕೆಲವೆಡೆ ಚದುರಿದಂತೆ ಮಳೆಯಾಗಲಿದ್ದು, ಜೂ.9ರಿಂದ ಮಳೆಯ ಪ್ರಮಾಣ ಹೆಚ್ಚಾಗಲಿದೆ.

ಒಳನಾಡಿನಲ್ಲಿ ಟ್ರಫ್ ನಿರ್ಮಾಣವಾಗಿರುವ ಹಿನ್ನಲೆಯಲ್ಲಿ ಭಾಗಶಃ ಮೋಡ ಕವಿದ ವಾತಾವರಣವಿದ್ದು, ರಾಜ್ಯದ ಹಲವೆಡೆ ಇಂದಿನಿಂದ ಮಳೆ ಆರಂಭವಾಗಲಿದೆ ಎಂದು ಹವಾಮಾನ ಇಲಾಖೆಯ ಬೆಂಗಳೂರು ಕೇಂದ್ರದ ನಿರ್ದೇಶಕ ಸಿ.ಎಸ್.ಪಾಟೀಲ್ ತಿಳಿಸಿದ್ದಾರೆ.

ಇಂದು ಮತ್ತು ನಾಳೆ ರಾಜ್ಯದ ಕೆಲವೆಡೆ



ಹಗುರದಿಂದ ಸಾಧಾ ರಣ ಮಳೆಯಾಗ ಲಿದೆ. ಜೂ.9ರಿಂದ 13ರವರೆಗೆ ರಾಜ್ಯಾದ್ಯಂತ ವ್ಯಾಪಕ ಮಳೆಯಾಗುವ ಮುನ್ಸೂಚನೆ ಗಳಿವೆ. ಅಲ್ಲದೆ ಈ ಅವಧಿಯಲ್ಲಿ ಮಳೆಯ ಪ್ರಮಾಣ ಗಣನೀಯವಾಗಿ ಹೆಚ್ಚಾಗಲಿದೆ ಎಂದು ಅವರು ಹೇಳಿದ್ದಾರೆ. ರಾಜಧಾನಿ ಬೆಂಗಳೂರು ಸುತ್ತಮುತ್ತ ಭಾಗಶಃ ಮೋಡ ಕವಿದ ವಾತಾವರಣ ಕಂಡುಬರಲಿದ್ದು, ಹಗುರದಿಂದ ಸಾಧಾರಣ ಮಳೆಯಾಗುವ ಮುನ್ಸೂಚನೆಗಳಿವೆ ಎಂದು ತಿಳಿಸಿದ್ದಾರೆ.

# ಬೋಧಗಯಾ ಮಹಾಬೋಧಿ ಆಡಳಿತ ಹಸ್ತಾಂತರಕ್ಕೆ ಆಗ್ರಹಿಸಿ ಜೂ. 9ರಂದು ಬೃಹತ್ ಪ್ರತಿಭಟನೆ

ಯುವ ಮಾರ್ಗ ಸುದ್ದಿ

**ರಾಯಚೂರು,ಜೂ.7–** ಬೋಧಗಯಾದ ಮಹಾಬೋಧಿ ಮಹಾವಿಹಾರದ ಆಡಳಿತವನ್ನು ಬೌದ್ಧರಿಗೆ ಸಂಪೂರ್ಣವಾಗಿ ಹಸ್ತಾಂತರಿಸಬೇಕೆಂದು ಆಗ್ರಹಿಸಿ ಜೂನ್ 9, ಸೋಮವಾರ ಬೆಳಿಗ್ಗೆ 10 ಗಂಟೆಗೆ ರಾಯಚೂರಿನಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ಮತ್ತು ಸಭೆ ನಡೆಯಲಿದೆ.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರವೀಂದ್ರನಾಥ ಪಟ್ಟಿ ಅವರು, ಪ್ರತಿಭಟನಾ ಮೆರವಣಿಗೆಯು ಸಿದ್ದಾರ್ಥ ಬುದ್ಧ ವಿಹಾರದ ಎದುರಿನ ನಗರ ಗ್ರಂಥಾಲಯದಿಂದ ಆರಂಭವಾಗಿ, ಕೇಂದ್ರ ಬಸ್ ನಿಲ್ದಾಣದ ಬಳಿಯ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಸಮಾಪ್ತಿಗೊಳ್ಳಲಿದೆ. ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಮಾಹಿತಿ ನೀಡಿದರು.

ಭಗವಾನ್ ಬುದ್ಧನು ಧ್ಯಾನ ಮಾಡಿ ಜ್ಞಾನೋದಯ ಪಡೆದ ಅತ್ಯಂತ ಪವಿತ್ರ ಸ್ಥಳ ಬೋಧಗಯಾ ಎಂದು ವಿವರಿಸಿದ ಪಟ್ಟಿ, ಬೌದ್ಧಧರ್ಮವು ಭಾರತದಲ್ಲಿ ಹುಟ್ಟಿ





ಅನೇಕ ದೇಶಗಳಿಗೆ ಹರಡಿದೆ. ಪ್ರಪಂಚದಾದ್ಯಂತದ ಅನೇಕ ರಾಷ್ಟ್ರಗಳು ಈ ಪವಿತ್ರ ಸ್ಥಳದ ಅಭಿವೃದ್ಧಿಗೆ ಕೊಡುಗೆ ನೀಡಿವೆ. ಆದರೆ, ಕ್ರಿ.ಶ. 1150 ರಿಂದ 1800 ರವರೆಗೆ ಶೈವ ಬ್ರಾಹ್ಮಣರು ಈ ಸ್ಥಳವನ್ನು ಅಕ್ರಮವಾಗಿ ವಶಪಡಿಸಿಕೊಂಡು ಬೌದ್ಧರ ಹಕ್ಕುಗಳನ್ನು ಕಸಿದುಕೊಂಡರು ಎಂದು ದೂರಿದರು.

1949 ರಲ್ಲಿ ಮಹಾಬೋಧಿ ವಿಹಾರವನ್ನು ನಿರ್ವಹಿಸಲು "ಬೋಧಗಯಾ ದೇವಾಲಯ ಕಾಯ್ದೆ"ಯನ್ನು ಜಾರಿಗೊಳಿಸಲಾಯಿತು. ಇದು ಬಿಟಿಎಂಸಿ (ಬೋಧಗಯಾ ದೇವಾಲಯ ನಿರ್ವಹಣಾ ಸಮಿತಿ) ರಚನೆಗೆ ಕಾರಣವಾಯಿತು. ಆದರೆ, ಈ ಆಡಳಿತ ಮಂಡಳಿಯಲ್ಲಿ ಬೌದ್ಧರಿಗೆ ಸಂಪೂರ್ಣ ಹಕ್ಕುಗಳನ್ನು ನೀಡದೆ, ನಾಲ್ಕು ಬೌದ್ಧರೊಂದಿಗೆ ನಾಲ್ಕು ಹಿಂದೂಗಳನ್ನು ಸೇರಿಸಲಾಯಿತು. ಇದು ಸಂವಿಧಾನದ 13, 25, 26 ಮತ್ತು 29 ನೇ ವಿಧಿಗಳಿಗೆ ವಿರುದ್ಧವಾಗಿದ್ದು, ಬೌದ್ಧರ ಧಾರ್ಮಿಕ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ಆರೋಪಿಸಿದರು. ಈ ಕಾಯ್ದೆಯನ್ನು ರದ್ದುಗೊಳಿಸಿ, ಮಹಾಬೋಧಿ ವಿಹಾರದ ಆಡಳಿತವನ್ನು ಸಂಪೂರ್ಣವಾಗಿ ಬೌದ್ಧರಿಗೆ ಹಸ್ತಾಂತರಿಸುವುದು 2ನೇ ಪುಟಕ್ಕೆ

# ಕಲಾವಿದರ ಪ್ರತಿಭೆ ಅನಾವರಣಗೊಳಿಸಲು ಮುನ್ನೂರು ಕಾಪು ಕಾರ್ಯ ಶ್ಲಾಘನೀಯ

ಯುವ ಮಾರ್ಗ ಸುದ್ದಿ

**ರಾಯಚೂರು,ಜೂ.7–**ರೈತರ ಉತ್ಸವ ಮುಂಗಾರು ಬೆಳ್ಳಿ ಹಬ್ಬದ ಮೂಲಕ ಕಲಾವಿದರ ಪ್ರತಿಭೆಯನ್ನು ಅನಾವರಣಗೊಳಿಸುತ್ತಿರುವ ಮುನ್ನೂರು ಕಾಪು ಸಮಾಜದ ಕಾರ್ಯ ಶ್ಲಾಘನೀಯ ಎಂದು ಕರ್ನಾಟಕ ಲಲಿತಾ ಅಕಾಡೆಮಿ ಮಾಜಿ ಸದಸ್ಯ ದೇವೇಂದ್ರ ಹುಡಾ ಅವರು ಹೇಳಿದರು.

ಶನಿವಾರ ನಗರದ ವೀರಾಂಜನೇಯ ಕಲ್ಯಾಣ ಮಂಟಪದಲ್ಲಿ ಮುಂಗಾರು ಸಾಂಸ್ಕೃತಿಕ ರಾಯ ಚೂರು ಬೆಳ್ಳಿ ಹಬ್ಬ ಮಹೋತ್ಸವದ ಅಂಗವಾಗಿ ವಿಶೇಷ ಚಿತ್ರಕಲಾ ಮತ್ತು ಪ್ರಬಂಧ ಸ್ಪರ್ಧೆ ಶಿಬಿರ ಕಾರ್ಯಕ್ರಮವನ್ನು ಚಿತ್ರ ಬಿಡಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಮುನ್ನೂರು ಕಾಪು ಸಮಾಜ ಕಳೆದ 25 ವರ್ಷಗಳಿಂದ ಮುಂಗಾರು ಹಬ್ಬವನ್ನು ರೈತರ ಉತ್ಸವ ಹಬ್ಬವ ನ್ನಾಗಿ ಭಾರಿ ವಿಜೃಂಭಣೆಯಿಂದ ಆಚರಣೆ ಮಾಡುವ ಮೂಲಕ ರೈತರ ಕೃಷಿ ಹಾಗೂ ಕಲಾವಿದರನ್ನು ಪ್ರತಿಭೆ ಯನ್ನು ಬೆಳ್ಳಿ ಹಬ್ಬದ ಮೂಲಕ ಅನಾವರಣ ಮಾಡುತ್ತಿರುವುದು



ಹೆಮ್ಮೆಯ ಸಂಗಾತಿ. ಜಿಲ್ಲೆಯ ಅನೇಕ ಪ್ರತಿಭಾವಂತ ಕಲಾವಿದರಿದ್ದಾರೆ ಅವರನ್ನು ಗುರುತಿಸಿ ಅವರ ಪ್ರತಿಭೆ ಯನ್ನು ಮುಂಗಾರು ಬೆಳ್ಳಿ ಹಬ್ಬದ ಮೂಲಕ ವೇದಿಕೆ ಕಲ್ಪಿಸಿದ ಮುನ್ನೂರು ಕಾಪು ಎಲ್ಲಾ ರಂಗದಲ್ಲಿ ಶ್ರೀಮಂತಿಕೆ ಹೊಂದಿದೆ.

ಕಾರಹುಣ್ಣಿಮೆ ಹಬ್ಬವನ್ನು ರೈತರು ಭಾರಿ ಅದ್ದೂರಿಯಾಗಿ ಆಚರಣೆ ಮಾಡುತ್ತಿದ್ದಾರೆ. ಜನಪದ ಕಲೆಗಳು ವಿಶಿಷ್ಟ ರೀತಿಯಲ್ಲಿ ಹುಟ್ಟಿ ಕೊಳ್ಳುತ್ತದೆ. ಆದರೆ ಮುನ್ನೂರು ಕಾಪು ಸಮಾಜ ಒಂದಡೇ ರೈತರನ್ನು ಕೃಷಿ ಚಟುವಟಿಕೆಯಲ್ಲಿ ತೊಡಗುವಂತೆಮಾಡುವುದು ಇನ್ನೊಂದಡೇ ಕಲಾವಿದರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವ ಕಾರ್ಯ ಮುನ್ನೂರು ಕಾಪು ಸಮಾಜ ಮಾಡುತ್ತಿದೆ ಎಂದರು. ನಂತರ ಮುನ್ನೂರು ಕಾಪು ಸಮಾಜದ ಹಿರಿಯ ಮುಖಂಡರು ಮಾಜಿ ಶಾಸಕರು ಹಾಗೂ ಹಬ್ಬದ ರೂವಾರಿ ಎ. ಪಾಪಾರೆಡ್ಡಿ ಮಾತನಾಡಿ, ಮುಂಗಾರು ಸಾಂಸ್ಕೃತಿಕ ರಾಯಚೂರು ಬೆಳ್ಳಿ ಹಬ್ಬದ ಹಿನ್ನಲೆ ಸದ್ಭಾವನ ಓಟ, ಕವಿಗೋಷ್ಠಿ, ರಂಗೋಲಿ, ಗೀತ ಕುಂಚ ಗಾಯನ ಸೇರಿ 2ನೇ ಪುಟಕ್ಕೆ

# ಸಿಂಧನೂರು: ಬಾಲ್ಯ ವಿವಾಹ ಪ್ರಕರಣ ದಾಖಲು

ಯುವ ಮಾರ್ಗ ಸುದ್ದಿ

**ಸಿಂಧನೂರು, ಜೂ.7–**ವೀರಾಪುರು ಗ್ರಾಮದಲ್ಲಿ ಬಾಲ್ಯವಿವಾಹ ನಡೆದಿದ್ದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ದೂರಿನ ಮೇರೆಗೆ ತುರ್ವಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಸ್ಕಿ ತಾಲೂಕಿನ ಉಮಲೂಟಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ವೀರಾಪುರು ಗ್ರಾಮದ ಹನುಮೇಶ ತಂದೆ ನೀರುಪಾದಪ್ಪ ಜೊತೆ ತಾಲ್ಲೂಕಿನ ಭೂತಲದಿನ್ನಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ರಾಮರೆಡ್ಡಿ ಕ್ಯಾಂಪ ಹನು ಮಂತ ಇವರ ಮಗಳ ಮದುವೆ ಮಾಡಲಾಗಿದೆ.

ವೀರಾಪುರು ಗ್ರಾಮದ ನೀರು ಪಾದಪ್ಪ ಇವರ ಮಗನಾದ ಹನ ಮೇಶ ವ.21.ಇತನ ಜೊತೆ ರಾಮರೆಡ್ಡಿ ಕ್ಯಾಂಪಿನ ಹನುಮಂತ ಇವರ 16 ವರ್ಷದ ಮಗಳನ್ನು ಕೊಟ್ಟು 6.4. 2025 ರಂದು ವೀರಾಪುರು ಗ್ರಾಮದ ಮದುಮಗನ ಮನೆ ಮುಂದೆ ಬಾಲ್ಯ ವಿವಾಹ ಮಾಡಲಾಗಿದೆ.



ಮೇ. 6.ರಂದು ಬಾಲ್ಯವಿವಾಹ ನಡೆದ ಬಗ್ಗೆ ವಿಡಿಯೋ ಸಮೇತ ಸಾರ್ವಜನಿಕರು ಎಪ್ರಿಲ್ 28 ರಂದು ಮಕ್ಕಳ ಸಹಾಯವಾಣೆಗೆ ದೂರು ನೀಡಿದ್ದಾರೆ ಮಕ್ಕಳ ಸಹಾಯವಾಣಿ ಮಾಹಿತಿ ಮೇರೆಗೆ ತುರ್ವಿಹಾಳ ಪೊಲೀಸ ಠಾಣೆಯ ಪಿಎಸ್ಐ ಸುಜಾತ ನಾಯಕ ಹಾಗೂ ಶಿಶುಅಭಿವೃದ್ಧಿ ಯೋಜನಾಧಿಕಾರಿ. ಅಶೋಕ, ಮೇಲ್ವಿಚಾರಕಿ ಉಮಾದೇವಿ, ವೀರಾಪುರು ಗ್ರಾಮಕ್ಕೆ ಹೋಗಿ ವಿಚಾರಿಸಿದಾಗ ಬಾಲವಿವಾಹ ನಡೆದ ಬಗ್ಗೆ ಪ್ರಕರಣ ಬೆಳಕಿಗೆ ಬಂದಿದೆ.

ಮದುಮಗ ಹನಮೇಶ ವೀರಾಪೂರು ಗ್ರಾಮದಲ್ಲಿ ಇದ್ದು ಮದುಮಗಳು ತಂದೆ ಮನೆ ರಾಮರೆಡ್ಡಿ ಕ್ಯಾಂಪ ನಲ್ಲಿ ಇದ್ದು ಮದುವೆ ಮುಗಿಸಿಕೊಂಡು ದುಡಿಯಲು ಬೆಂಗಳೂರಿಗೆ ಹೋಗಬೇಕು ಎನ್ನುವಷ್ಟರಲ್ಲಿ ಬಾಲವಿವಾಹ ಪ್ರಕರಣ ಬೆಳಕಿಗೆ 2ನೇ ಪುಟಕ್ಕೆ

# ಮುಸ್ಲಿಂ ಸಮುದಾಯದವರಿಗೆ ಬಕ್ರಿದ್ ಹಬ್ಬದ ಶುಭಾಶಯ ಕೋರಿದ ಶಾಸಕರು



ಯುವ ಮಾರ್ಗ ಸುದ್ದಿ

**ಮಾನ್ವಿ,ಜೂ.7–** ಪಟ್ಟಣದಲ್ಲಿ ಬಕ್ರಿದ್ ಹಬ್ಬವನ್ನು ಮುಸ್ಲಿಂ ಸಮುದಾಯದವರು ಶ್ರದ್ದ ಭಕ್ತಿಗಳಿಂದ ಆಚರಿಸಿದರು. ಬೆಳಿಗ್ಗೆ ಈದ್ಗಾ ಮೈದಾನದಲ್ಲಿ ಮುಸ್ಲಿಂ ಸಮುದಾಯದವರು ಸಾಮೂಹಿಕ ಪ್ರರ್ಥನೆ ಸಲ್ಲಿಸಿದರು.

ಶಾಸಕ ಹಂಪಯ್ಯ ನಾಯಕ ಈದ್ಗಾ ಮೈದಾನದ ಆವರಣದಲ್ಲಿ ಮುಸ್ಲಿಂ ಸಮುದಾಯದವರಿಗೆ ಬಕ್ರಿದ್ ಹಬ್ಬದ ಶುಭಾಶಯಗಳನ್ನು ತಿಳಿಸಿದರು.

ಕಾಂಗ್ರೇಸ್ ಪಕ್ಷದ ಮುಖಂಡರಾದ ಬಿ.ಕೆ. ಅಂಬರೇಶಪ್ಪ,ರಾಜ ಸುಭಾಷಚಂದ್ರನಾಯಕ, ಮಹಾಂತೇಶ ಸ್ವಾಮಿ ರೌಡೂರು, ಪುರಸಭೆ ಸದಸ್ಯರಾದ ರೇವಣಸಿದ್ದಯ್ಯಸ್ವಾಮಿ.ಜಿ.ನಾಗರಾಜ ಸೇರಿದಂತೆ ಇನ್ನಿತರರು ಇದ್ದರು.

# ಅರಕೇರಾ ಭಗಮ್ಮ ದೇವತೆ ಜಾತ್ರೆಗೆ ತೆರೆ

ಯುವ ಮಾರ್ಗ ಸುದ್ದಿ

**ಅರಕೇರಾ,ಜೂ.7–**ಪಟ್ಟಣದಲ್ಲಿನ ಶ್ರೀಭಗಮ್ಮ ದೇವಿ ಜಾತ್ರೆಯು ಕಳೆದ 3ದಿನಗಳಿಂದ ಜರುಗಿದ ಗ್ರಾಮ ದೇವತೆ ಜಾತ್ರೆಗೆ ಶುಕ್ರವಾರ ಸಂಜೆ ಶ್ರೀಭಗಮ್ಮ ದೇವಿ ದೇವಸ್ಥಾನದಿಂದ ಬಿಂದಿಗೆ ಸೇವೆ ಬೆಟ್ಟದ ಮೇಲೆಗುರುವ ದೇವರ ಮನೆಯವರಿಗೂ ಮೇರವಣಿಗೆ ಮೂಲಕ ಭಕ್ತರು ಸಕಲ ವಾದ್ಯ ವೈಭವಗಳೊಂದಿಗೆ ಮೆರವಣಿಗೆ ಮೂಲಕ ದೇವರಮನೆಗೆ ಬಿಂದಿಗೆ ಸೇವೆ ನಡೆಯಿತು.

ಜಾತ್ರೆಯ ಅಂಗವಾಗಿ ಪಟ್ಟಣದಲ್ಲಿ ಪ್ರಮುಖ ರಸ್ತೆಗಳ ತುಂಬೆಲ್ಲಾ ಲೈಟಿನ್ ಅಲಂಕಾರ ಜಾತ್ರಿಯ ಕಳೆಯನ್ನು ಇಮ್ಮಡಿಸಿತು ಜಾತ್ರೆಯ ಸಮಿತಿಯವರು ಕೈಗೊಂಡಿರುವ ವ್ಯವಸ್ಥಿತದಿಂದಾ ಜಾತ್ರೆಯು ಅದೂರಿಯಾಗಿ ಜರುಗಿತು. ಹಿಂದು ಮುಸ್ಲಿಂ ಬಾಂಧವರ ಭಾವೈಕತೆಗೆ ಸಾಕ್ಷಿಯಾಯಿತು. ದೇವದುರ್ಗ ಪೋಲಿಸ್ ಅಧಿಕಾರಿಗಳಾದ ಮಂಜುನಾಥ ಹಾಗೂ ಇಲಾಖೆಯ ಸಿಬ್ಬಂದಿಯವರು ಕೈಗೊಂಡಿ ಭದ್ರತೆ,ಟ್ರಾಫಿಕ್ ನಿಯಂತ್ರಣ ಕ್ರಮಗಳು ಸೇರಿದಂತೆ ಜಾತ್ರೆಯಲ್ಲಿ ಸಮಸ್ಯೆ ಕಂಡು ಬರದಂತೆ ಜರುಗಿತು.





ದೇವಿಯ ಜಾತ್ರೆಯೂ ಊರಿನ ಪ್ರಮುಖ ವತನದಾರರನ್ನು ಒಳಗೊಂಡತೆ ಸಕಲ ಪಟ್ಟಣದ ಎಲ್ಲಾ ವರ್ಗದವರ ಸಹಾಯ ಸಹಕಾರದಲ್ಲಿ ಪಟ್ಟಣದ ಸುತ್ತಮುತ್ತಲ್ಲಿನ ಮೂವತ್ತೆರಡು ಹಳ್ಳಿಗಳು ಸೇರಿದಂತೆ ಸಾವಿರರು ಭಕ್ತರ ಸಮ್ಮುಖದಲ್ಲಿ ಸವಾರೋಪಗೊಂಡಿತು. ಇನ್ನೂ ಪ್ರತಿ ಮಂಗಳವಾರ ದಿವಸದಂದು ಸಂಜೆ ದೇವರ ಮನೆಯಿಂದ ಶ್ರೀಭಗಮ್ಮ ದೇವಿಯ ದೇವಸ್ಥಾನದವರಿಗೂ ಬಿಂದಿಗೆ ಸೇವೆ ಆರಂಭವಾಗಿ ಮತ್ತೆ ಪುನ ದೇವರಮನೆಗೆ ಬಿಂದಿಗೆ ಸೇವೆಯು 5ಮಂಗಳವಾರದವರಿಗೂ ಜರುಗುವುದು.

ಶ್ರೀಭಗಮ್ಮ ದೇವಿಯ ಬೆಳ್ಳಿ ಮೂರ್ತಿ ತೈಯಾರಿಸಿದ ಆಂದ್ರ ಪ್ರದೇಶದ ಗುಂತಕಲ್ ನಿವಾಸಿ ಶ್ರೀನಿವಾಸ ಆಚಾರ್ಯರವರಿಗೆ ಮಾಜಿ ಸಂಸದ ಬಿ.ವಿ.ನಾಯಕ ಹಾಗೂ ಆರ್ ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ರಾಜಶೇಖರನಾಯಕರವರು ಸನ್ಮಾನಿಸಿ ಗೌರವಿಸಿದರು. ದೇವಸ್ಥಾನದ ವತಿಯಿಂದ ಗಣ್ಯರಿಗೆ,ಕಾರ್ಯಕರ್ತರಿಗೆ ಸಾರ್ವಜನಿಕರಿಗೆ ಸನ್ಮಾನ ಸತ್ಕಾರ ಹಾಗೂ ವೀಳ್ಯ ಬಾಬತ್ತು ನೀಡಲಾಯಿತು. 2ನೇ ಪುಟಕ್ಕೆ

## ಮೊದಲನೇಯ ಪುಟದಿಂದ

# ಬೋಧಗಯಾ ಮಹಾಬೋಧಿ ಆಡಳಿತ ಹಸ್ತಾಂತರಕ್ಕೆ ಆಗ್ರಹಿಸಿ ಜೂ. 9ರಂದು ಬೃಹತ್ ಪ್ರತಿಭಟನೆ

ಈ ಹೋರಾಟದ ಮುಖ್ಯ ಉದ್ದೇಶವಾಗಿದೆ ಎಂದು ಅವರು ಹೇಳಿದರು. ಎಂ.ಆರ್. ಬೇರಿ ಮಾತನಾಡಿ, ಫೆಬ್ರವರಿ 12, 2025 ರಿಂದ ಪೂಜ್ಯ ಬೌದ್ಧ ಭಿಕ್ಕುಗಳು ಮಹಾಬೋಧಿ ವಿಹಾರದ ಮೇಲೆ ಸಂಪೂರ್ಣ ಹಕ್ಕುಗಳಿಗಾಗಿ ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ತಿಳಿಸಿದರು. ಈ ಹೋರಾಟವನ್ನು ಹತ್ತಿಕ್ಕಲು ಬಿಹಾರ ಸರ್ಕಾರ ಮತ್ತು ಕೇಂದ್ರ ಸರ್ಕಾರವು ವಿವಿಧ ತಂತ್ರಗಳನ್ನು ಅಳವಡಿಸಿಕೊಂಡಿವೆ. ಫೆಬ್ರವರಿ 27 ರಂದು ಭಿಕ್ಕುಗಳ ಮೇಲೆ ಅಮಾನವೀಯ ದೌರ್ಜನ್ಯ ಎಸಗಲಾಯಿತು ಎಂದು ಅವರು ಆಘಾತ ವ್ಯಕ್ತಪಡಿಸಿದರು. ಇಂತಹ ದೌರ್ಜನ್ಯಗಳ ನಡುವೆಯೂ ಹೋರಾಟ ತೀವ್ರಗೊಳ್ಳುತ್ತಿದೆ ಎಂದು ಅವರು ಹೇಳಿದರು.

ಈ ಹೋರಾಟಕ್ಕೆ ಬೆಂಬಲ ನೀಡಲು, ಎಲ್ಲಾ ಬೌದ್ಧ ಸಂಘಟನೆಗಳ ಸದಸ್ಯರು, ದಲಿತ ಮುಖಂಡರು, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಸರ್ಕಾರಿ ನೌಕರರು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಜೂನ್ 9 ರಂದು ನಡೆಯುವ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿ ಈ ಸ್ವಾಭಿಮಾನಿ ಹೋರಾಟವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ರವಿ ಕುಮಾರ್ ದೇವೇಂದ್ರಪ್ಪ, ಜಗನ್ನಾಥ್, ಬಸವರಾಜ್, ತಿಮ್ಮಾರೆಡ್ಡಿ, ವೆಂಕಟೇಶ್ ಮತ್ತು ಇತರರು ಉಪಸ್ಥಿತರಿದ್ದರು.

# ಅರಕೇರಾ ಭಗಮ್ಮ ದೇವತೆ ಜಾತ್ರೆಗೆ ತೆರೆ

ಜಿಪಂ ಮಾಜಿ ಸದಸ್ಯ ರಾಜಾ ಸತ್ಯನಾರಾಯಣ ನಾಯಕ ಪೊಲೀಸ್ ಪಾಟಿಲ್, ಜಾತ್ರಾ ಸಮಿತಿ ಅಧ್ಯಕ್ಷ ತಿಮ್ಮಪ್ಪ ನಾಯಕ ಪೊಲೀಸ್ ಪಾಟೀಲ್, ಉಪಾಧ್ಯಕ್ಷ ಕೆ.ಅನಂತರಾಜ ನಾಯಕ, ಕಾರ್ಯದರ್ಶಿ ಚನ್ನವೀರಯ್ಯ ಸ್ವಾಮಿ ಹಿರೇಮಠ, ಪ್ರಮುಖರಾದ ಸೀತಣ್ಣ ನಾಯಕ ಗುರಿಕಾರ, ವೆಂಕಟೇಶ ನಾಯಕ ದೊರೆ, ಬಸವರಾಜ ಪೂಜಾರಿ, ಹನುಮಂತ್ರಾಯ ಪೂಜಾರಿ, ಸಿದ್ದಾರ್ಥ ಹವಲ್ದಾರ, ಬಸವರಾಜ ನಾಯಕ ಕ್ವಾಟೆ ದೊರೆ, ಶೇಖರಪ್ಪ ಗೌಡ ಮಾಲಿ ಪಾಟೀಲ್, ವರದರಾಜ ನಾಯಕ ದೊರೆ ತೆಗ್ಗಿಹಾಳ, ಗೋಪಿಕೃಷ್ಣ ಗುರುವಿನ, ರಾಚಯ್ಯ ಸ್ವಾಮಿ ಮಠಪತಿ, ಚಂದ್ರಶೇಖರ ಶೆಟ್ಟಿ ಸೇರಿದಂತೆ ಪಟ್ಟಣದಲ್ಲಿನ ಶ್ರೀಭಗಮ್ಮ ದೇವಿಯ ಸಮಸ್ತ ಭಕ್ತಾಧಿಗಳು ಉಪಸ್ಥಿತರಿದ್ದರು.

# ಸಿಂಧನೂರು: ಬಾಲ್ಯ ವಿವಾಹ ಪ್ರಕರಣ ದಾಖಲು

ಬಂದಿದೆ.ಸಿಡಿಪಿಓ ಅಶೋಕ ನೀಡಿದ ದೂರಿನ ಮೇರೆಗೆ ತುರ್ವಿಹಾಳ ಪೊಲೀಸ ಠಾಣೆಯ ಪಿಎಸ್ಐ ಸುಜಾತ ನಾಯಕ ಬಾಲ್ಯ ವಿವಾಹ ಪ್ರಕರಣ ದಾಖಲಿಸಿಕೊಂಡು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿಗಳ ಸಮೇತ ವರ ವದುವಿನ ಮನೆಗೆ ಹೋಗಿ ಶಾಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ ಮದುಮಗನಿಗೆ 21 ವರ್ಷ ಮದುಮಗಳಿಗೆ 16 ಇರುವುದು ದೃಢಪಟ್ಟಿದೆ

# ಕಲಾವಿದರ ಪ್ರತಿಭೆ ಅನಾವರಣಗೊಳಿಸಲು ಮುನ್ನೂರು ಕಾಪು ಕಾರ್ಯ ಶ್ಲಾಘನೀಯ

ಅನೇಕ ಅನೇಕ ರೀತಿಯ ವೈವಿಧ್ಯಮಯ ಕಾರ್ಯಕ್ರಮಗಳು ಹಮ್ಮಿಕೊಂಡಿದ್ದು, ಸಾಹಿತಿಗಳು ಕವಿಗಳು ಕಲಾವಿದರು ತಮ್ಮ ಪ್ರತಿಭೆಯನ್ನು ತಮ್ಮ ಪ್ರಸ್ತುತಪಡಿಸಿದ್ದಾರೆ. ಸಮಾಜದಿಂದ ಉತ್ತಮ ಕಾರ್ಯಕ್ರಮಗಳು ನಡೆಸಲಾಗುತ್ತದೆ. ಮುಂಗಾರು ಬೆಳೆ ಹಬ್ಬದ ಪ್ರಯುಕ್ತ ಎಲ್ಲಾ ಕಲಾವಿದರನ್ನು ಪ್ರೋತ್ಸಾಹಿಸುವ ಕೆಲಸ ಸಮಾಜ ಮಾಡುತ್ತದೆ ಎಂದರು. ಪಿ. ಚಂದ್ರಶೇಖರ ಅವರು ಕಾರ್ಯಕ್ರಮ ನಿರೂಪಣೆ ಮಾಡಿದರು. ದಂಡಪ್ಪ ಬಿರಾದಾರ್ ಅವರು ಸ್ವಾಗತ ಕೋರಿದರು.

ಈ ಸಂದರ್ಭದಲ್ಲಿ ಹಿರಿಯ ಸಾಹಿತಿ ವೀರ ಹನುಮಾನ್, ಹಿರಿಯ ಪತ್ರಕರ್ತ ಕೆ. ಸತ್ಯನಾರಾಯಣ, ಈರಣ್ಣ ಬೆಂಗಾಲಿ, ಹಿರಿಯ ಚಿತ್ರ ಕಲಾವಿದರು ಎಸ್ ಎಸ್ ಮ್ಯಾರ್ದ, ರಾಮಣ್ಣ ಮ್ಯಾರ್ದ, ರಾಳ ತಿಮ್ಮರೆಡ್ಡಿ, ಜಿ.ಶೇಖರ್ ರೆಡ್ಡಿ, ಜಿ. ಪ್ರತಾಪ್ ರೆಡ್ಡಿ, ಜಿ. ವೆಂಕಟರೆಡ್ಡಿ, ಪಂಡ್ನ ರಾಜೇಂದ್ರ ರೆಡ್ಡಿ ಬಿ. ತಿಮ್ಮರೆಡ್ಡಿ, ಜಿ. ನರಸರೆಡ್ಡಿ, ಯು.ನರಸರೆಡ್ಡಿ, ಮುನಿ ಮುನಿರೆಡ್ಡಿ, ಮ್ಯಾವರ, ದೇವೇಂದ್ರಗೌಡ, ಯು. ಭೀಮರೆಡ್ಡಿ, ಸೇರಿದಂತೆ ಉಪಸ್ಥಿತರಿದ್ದರು.

# ಕಾಲ್ತುಳಿತ ವರದಿ ಕುನ್ಹಾ ಆಯೋಗಕ್ಕೆ ಸೂಚನೆ

**ಬೆಂಗಳೂರು,ಜೂ.7:**ಆರ್‌ಸಿಬಿ ವಿಯೋತ್ಸವ ವೇಳೆ ಸಂಭವಿಸಿದ ಕಾಲ್ತುಳಿತ ಪ್ರಕರಣದಲ್ಲಿ 11 ಮಂದಿ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಮೈಕೆಲ್‌ಕುನ್ಹಾ ಆಯೋಗ ತನಿಖೆ ನಡೆಸುತ್ತಿದ್ದು, ಪರಿಶೀಲನೆ ನಡೆಸಿ ವರದಿ ನೀಡುವಂತೆ ಸರ್ಕಾರ ಸೂಚನೆ ನೀಡಿದೆ.

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಈ ದುರಂತ ಸಂಭವಿಸಿತ್ತು. ಈಗಾಗಲೇ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ಬಂಧಿಸಲಾಗಿದೆ. ಮೈಕೆಲ್ ಕುನ್ಹಾ ಆಯೋಗವು ಚಾಮರಾಜನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಕೋವಿಡ್ ವೇಳೆ ಆಮ್ಲಜನಕ ಕೊರತೆಯಿಂದ ಮೃತಪಟ್ಟ ಘಟನೆಯ ಕುರಿತು ವಿಚಾರಣೆ ನಡೆಸುತ್ತಿದೆ. ಇದಕ್ಕೆ ಮುಂಚಿತವಾಗಿ ಕಾಲ್ತುಳಿತ



ದುರ್ಘಟನೆ ವರದಿ ನೀಡು ವಂತೆ ಸರ್ಕಾರ ಆಯೋಗಕ್ಕೆ ಸೂಚಿಸಿದೆ.

**ಕೋವಿಡ್ ವರದಿ ಒಂದು ತಿಂಗಳು ವಿಸ್ತರಣೆ:** ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾಲ್ತುಳಿತ ಪ್ರಕರಣಕ್ಕೆ ಆಧ್ಯತೆ ನೀಡಿ ಒಂದು ತಿಂಗಳೊಳಗಾಗಿ ವಿಚಾರಣೆ ಪೂರ್ಣಗೊಳಿಸಿ ವರದಿ ಸಲ್ಲಿಸುವಂತೆಯೂ ಸರ್ಕಾರ ಸೂಚಿಸಿದೆ.

ಚಾಮರಾಜನಗರ ಆಸ್ಪತ್ರೆಯಲ್ಲಿ ನಡೆದ ದುರಂತ ಪ್ರಕರಣದ ವರದಿಯನ್ನು ಆ. 31 ರವರೆಗೆ ವಿಸ್ತರಣೆ ಮಾಡಿ ಆದೇಶ ಹೊರಡಿಸಲಾಗಿದೆ. 2021ರ ಮೇ 2 ರಂದು ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಮೈಸೂರಿನಿಂದ ಸಕಾಲದಲ್ಲಿ ಆಮ್ಲಜನಕ ಪೂರೈಕೆಯಾಗದ ಕಾರಣ 36 ಮಂದಿ ಮೃತಪಟ್ಟಿದ್ದರು. ಆಮ್ಲಜನಕ ಕೊರತೆಯಿಂದಾಗಿ ವೆಂಟಿಲೇಟರ್, ಐಸಿಯು ಹಾಗೂ ಉಸಿರಾಟದ ತೊಂದರೆಯಿಂದ ರೋಗಿಗಳು ಮೃತಪಟ್ಟಿದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

9743497111, 9743496111

# ಸಂಭ್ರಮದ ಈದ್ ಉಲ್ ಅಝ್ಹಾ ಆಚರಣೆ



**ಲಿಂಗಸುಗೂರು,ಜೂ.7–** ತ್ಯಾಗ, ಬಲಿದಾನಗಳ ಸಂಕೇತವಾದ ಈದ್ ಉಲ್ ಅಝ್ಹಾ (ಬಕ್ರೀದ್) ಹಬ್ಬವನ್ನು ಮುಸ್ಲಿಂ ಬಾಂಧವರು ಸಡಗರ ಸಂಭ್ರಮದಿಂದ ಆಚರಿಸಿದರು. ಪಟ್ಟಣದ ಈದ್ಗಾ ಮೈದಾನದಲ್ಲಿ ಇಸ್ಲಾಂ ಧರ್ಮದಲ್ಲಿ ಕುರ್ಬಾನಿಯ ಮಹತ್ವದ ಬಗ್ಗೆ ಹಫೀಜ್ ಸಾಹೇಬರು ತಿಳಿ ಹೇಳಿದರು. ಬಳಿಕ ಖಾಜಿ ಮಹಮ್ಮದ್ ಯೂನಸ್ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

**ಯೋಧನಿಗೆ ಗೌರವ ಸನ್ಮಾನ:** ಎರಡು ದಶಕಗಳ ಕಾಲ ಭಾರತೀಯ ಸೇನೆಯಲ್ಲಿ ದೇಶ ಸೇವೆಗೈದು ನಿವೃತ್ತಿಯಾದ ಲಿಂಗಸುಗೂರು ಪಟ್ಟಣದ ಮಾಜಿ ಯೋಧ ಮಹೆಬುಬಸಾಬ್ ದವಲಸಾಬ್ ನದಾಫ್ ಅವರನ್ನು ಕಮೀಟಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ನಂತರ ಖಬರಸ್ಥಾನಕ್ಕೆ ತೆರಳಿ ಅಗಲಿದ ಹಿರಿಯರ ಆತ್ಮಕ್ಕೆ ಶಾಂತಿ ಕೋರಿ ಅಲ್ಲಾಹುವಿನಲ್ಲಿ ಪ್ರಾರ್ಥಿಸಲಾಯಿತು.

ತಂಜಿಮುಲ್ ಮುಸ್ಲಿಮ್ ಕಮಿಟಿ ಅಧ್ಯಕ್ಷ ಖಾದರಬಾಶಾ, ಮುಖಂಡರಾದ ಮಹಮ್ಮದ್ ರಫಿ, ಅನಿಸ್ ಪಾಶಾ, ಅಹ್ಮದ್ ಚಾವುಸ್, ಇಸ್ಮಾಯಿಲ್, ಹುಸೇನಸಾಬ, ಜಾಫರ್ ಹುಸೇನ್, ಖಾಜಾಹುಸೇನ್, ಹಾರೂನ್, ಇಕ್ಬಾಲ್, ಜಾಹೀರುದ್ದೀನ್, ಅಖ್ತರ್ ಪಟೇಲ್, ಫಯಾಜ್ ಅಹ್ಮದ್, ಮಹಮ್ಮದ್ ಹಾಜಿಬಾಬಾ ಕರಡಕಲ್, ಅಲ್ಲಾವುದ್ದೀನ್ ಪಟೇಲ್, ಇಕ್ಬಾಲ್ ಹವಾಲ್ದಾರ್, ಬಾಬಾ ಖಾಜಿ, ಅಹ್ಮದ್, ಸಾದತಲಿ, ಮಹೆಬೂಬಸಾಬ್ ಸಂತೆಕೆಲ್ಲೂರ್, ಸಮುದಾನಿಸಾಬ್, ಸತ್ತಾರ್ ಸಾಬ್, ಡಾಕ್ಟರ್ ಅಯ್ಯುಬ್, ಮಹಮ್ಮದ್ ಹನೀಫ್, ಮಹಮ್ಮದ್ ಅಶ್ರಫ್, ನೂಮಾನ್, ಜೋಹರಾನ್ ಸೇರಿ ಸಾವಿರಾರು ಸಂಖ್ಯೆಯಲ್ಲಿ ಬಾಂಧವರು ಜಮಾಯಿಸಿದ್ದರು.

# ನೀಟ್ –ಯುಜಿ ಮರು ಪರೀಕ್ಷೆ ಅರ್ಜಿ ವಜಾ



**ನವದೆಹಲಿ,ಜೂ.7–** ನೀಟ್–ಯುಜಿ 2025 ಮರು ಪರೀಕ್ಷೆಗೆ ಒತ್ತಾಯಿಸಿ ಸಲ್ಲಿಸಿದ್ದ ಅರ್ಜಿಗಳನ್ನು ವಜಾಗೊಳಿಸಿರುವ ಮದ್ರಾಸ್ ಹೈಕೋರ್ಟ್ ಫಲಿತಾಂಶವನ್ನು ಘೋಷಿಸಲು ದಾರಿ ಮಾಡಿಕೊಟ್ಟಿದೆ, ಮೇ ತಿಂಗಳ ಪರೀಕ್ಷೆಯ ಸಮಯದಲ್ಲಿ ಚೆನ್ನೈನ ನಾಲ್ಕು ಕೇಂದ್ರಗಳಲ್ಲಿ ವಿದ್ಯುತ್ ವೈಫಲ್ಯ ಉಲ್ಲೇಖಿಸಿ ಹದಿನಾರು ವಿದ್ಯಾರ್ಥಿಗಳು ಹೊಸ ಪರೀಕ್ಷೆಗೆ ಕೇಳಿದ್ದರು. ಅದನ್ನು ರದ್ದು ಮಾಡಿದೆ

ನ್ಯಾಯಾಲಯ ಎಲ್ಲರಿಗೂ ಪರೀಕ್ಷೆಯನ್ನು ರದ್ದುಗೊಳಿಸುವಷ್ಟು ಗಂಭೀರ ವಿಷಯ ಕಂಡುಕೊಳ್ಳಲಿಲ್ಲ. ಸುಮಾರು 22 ಲಕ್ಷ ವಿದ್ಯಾರ್ಥಿಗಳು ನೀಟ್ –ಯುಜಿ 2025 ಅನ್ನು ತೆಗೆದುಕೊಂಡಿದ್ದಾರೆ ಮತ್ತು ಅಂತಹ "ಸ್ಥಳೀಯ ಮತ್ತು ಸಣ್ಣ" ಅಡೆತಡೆಗಳಿಂದಾಗಿ ಮರು ಪರೀಕ್ಷೆಗೆ ಅವಕಾಶ ನೀಡುವುದು ಉಳಿದವರಿಗೆ ಅನ್ಯಾಯವಾಗುತ್ತದೆ ಎಂದು ನ್ಯಾಯಮೂರ್ತಿ ಸಿ ಕುಮಾರಪ್ಪನ್ ಹೇಳಿದ್ದಾರೆ

ಇದಕ್ಕೂ ಮುನ್ನ ಮೇ 17 ರಂದು ನ್ಯಾಯಾಲಯ ಫಲಿತಾಂಶ ಪ್ರಕಟಣೆ ಸ್ಥಗಿತಗೊಳಿಸುವಂತೆ ಎನ್‌ಟಿಎ ಸೂಚಿಸಿತ್ತು. ಇದು ಗೊಂದಲಗಳಿಗೆ ಕಾರಣವಾಗಿತ್ತು. ಅನಿರೀಕ್ಷಿತ ಚಂಡಮಾರುತದಿಂದ ವಿದ್ಯುತ್ ವೈಫಲ್ಯ ಸಂಭವಿಸಿದೆ ಎಂದು ನ್ಯಾಯಾಧೀಶರು ಒಪ್ಪಿಕೊಂಡರು ಆದರೆ ಪರೀಕ್ಷೆಯು ಮಧ್ಯಾಹ್ನ 2 ರಿಂದ 5 ರವರೆಗೆ ನಡೆಯಿತು, ಅಂದರೆ ವಿದ್ಯಾರ್ಥಿಗಳಿಗೆ ಇನ್ನೂ ನೈಸರ್ಗಿಕ ಬೆಳಕು ಇದೆ ಎಂದು ಹೇಳಿದೆ

ಈ ಸಮಸ್ಯೆಯನ್ನು ನಿರ್ಣಯಿಸಲು ಎನ್ ಟಿಎ "ವೈಜ್ಞಾನಿಕ ವಿಧಾನಗಳು" ಮತ್ತು ಆನ್–ಗ್ರೌಂಡ್ ಚೆಕ್ ಬಳಸುವುದನ್ನು ನ್ಯಾಯಾಲಯ ಬೆಂಬಲಿಸಿದೆ. ಯಾವುದೇ ಕೆಟ್ಟ ಉದ್ದೇಶ ಸಾಬೀತಾಗದ ಕಾರಣ, ಮರು ಪರೀಕ್ಷೆ ನಡೆಸದಿರುವ ಎನ್ ಟಿ ನಿರ್ಧಾರವನ್ನು ಗೌರವಿಸಬೇಕು ಎಂದು ನ್ಯಾಯಾಲಯ ಹೇಳಿದೆ.

# ಸಿಎಂ ವಿರುದ್ಧ ರಾಜ್ಯಪಾಲರಿಗೆ ದೂರು

**ಬೆಂಗಳೂರು,ಜೂ.7–**ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಲಾಗಿದೆ.



ಬೆಂಗಳೂರಿನ ಕೊಟ್ಟಿಗೆಪಾಳ್ಯದ ನಿವಾಸಿ ಗಿರೀಶ್‌ಕುಮಾರ್ ಸುದೀರ್ಘ ಪತ್ರದೊಂದಿಗೆ ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ಆರ್‌ಸಿಬಿ ವಿಜಯೋತ್ಸವಕ್ಕೆ ಸಾರ್ವಜನಿಕರನ್ನು ಸ್ವತಃ ಮುಖ್ಯಮಂತ್ರಿಗಳೇ ಆಹ್ವಾನ ನೀಡಿದ್ದಾರೆ. ಸಮರ್ಪಕ ವ್ಯವಸ್ಥೆ ಮಾಡದೆ ನಿರ್ಲಕ್ಷ್ಯ ವಹಿಸಿದ್ದರಿಂದ 11 ಮಂದಿ ಅಮಾಯಕರು ಸಾವನ್ನಪ್ಪಿದ್ದಾರೆ. ಹೀಗಾಗೀ ಸೂಕ್ತ ಕ್ರಮಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

18 ವರ್ಷಗಳ ಬಳಿಕ ಆರ್‌ಸಿಬಿ ಐಪಿಎಲ್ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಆದರೆ, ಐಪಿಎಲ್ ಸಿದ್ಧಾಂತದ ವ್ಯಾಪಾರ, ಆದಾಯ ಗಳಿಸುವುದು, ಇದು ರಾಷ್ಟ್ರಮಟ್ಟದಲ್ಲಿ ದೇಶವನ್ನು ಜಾಗೃತಿ ಮೂಡಿಸುವ ಕೆಲಸವನ್ನು ಮಾಡುವುದಿಲ್ಲ. ಐಪಿಎಲ್‌ನಲ್ಲಿ ಬೆಟ್ಟಿಂಗ್ ಕಟ್ಟಿ ಮನೆ–ಮಠ ಕಳೆದುಕೊಂಡಿರುವ ಪ್ರಕರಣವಿದೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.ಖಾಸಗಿಯವರು ಆಟಗಾರರನ್ನು ಕೊಂಡುಕೊಂಡು ತಂಡಗಳನ್ನು ಮಾಡಿಕೊಂಡು ಆಟವಾಡಿಸಿ ಲಾಭ ಗಳಿಸುವ ಉದ್ದೇಶವನ್ನೇ ಹೊಂದಿದ್ದಾರೆ. ಆಟಗಾರರಲ್ಲೂ ಸಿದ್ಧಾಂತವಿರುವುದಿಲ್ಲ. ಹೆಚ್ಚು ಹಣ ನೀಡಿ ಖರೀದಿಸಿದವರ ತಂಡಕ್ಕಾಗಿ ಆಟಗಾರರು ಆಡುತ್ತಾರೆ. ಈ ರೀತಿ ಗೆದ್ದವರಿಗೆ ಸರ್ಕಾರದ ಮಟ್ಟದಲ್ಲಿ ವೈಭವದಿಂದ ಗೌರವಿಸಬಹುದೇ? ಅಲ್ಲದೇ ಡಿಸಿಎಂ ಡಿ.ಕೆ ಶಿವಕುಮಾರ್, ಎಚ್‌ಎಎಲ್ ಏರ್‌ಪೋರ್ಟ್‌ಗೆ ಹೋಗಿ ಆಟಗಾರರನ್ನು ಸ್ವಾಗತಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ದೇಶಕ್ಕಾಗಿ ಮತ್ತು ರಾಜ್ಯಕ್ಕಾಗಿ ಪ್ರತಿನಿಧಿಸಿ ಪದಕ ಪಡೆದ ಅನೇಕ ಸಾಧಕರಿದ್ದಾರೆ. ಇವರಿಗೆ ಸರ್ಕಾರ ಆದ್ಯತೆ ನೀಡಿಲ್ಲ. ಯುದ್ಧದಲ್ಲಿ ಹೋರಾಡಿ ವೀರ ಮರಣವನ್ನಪ್ಪಿದ ಯೋಧರ ಮನೆಗೂ ಭೇಟಿ ಕೊಡಲು ಸರ್ಕಾರಕ್ಕೆ ಆಸಕ್ತಿ ಇಲ್ಲ. ಆದರೆ, ಐಪಿಎಲ್‌ನಲ್ಲಿ ಗೆಲುವು ಸಾಧಿಸಿದ ತಂಡಕ್ಕೆ ಸ್ವಾಗತ ಕೋರಿರುವುದು ಎಷ್ಟು ಸರಿ ಎಂದು ಗಿರೀಶ್ ಪ್ರಶ್ನಿಸಿದ್ದಾರೆ.ಕಾಲ್ತುಳಿತ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಅಮಾಯಕರ ಸಾವಿಗೆ ಕಾರಣರಾದವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.

# ಸೂಟ್‌ಕೇಸ್‌ನಲ್ಲಿ ಬಾಲಕಿ ಶವ ಪತ್ತೆ ಪ್ರಕರಣ : ಬಿಹಾರದ 7 ಮಂದಿ ವಿಚಾರಣೆ

ಬೆಂಗಳೂರು,ಜೂ.7–ಸೂಟ್‌ಕೇಸ್‌ನಲ್ಲಿ ಬಾಲಕಿಯ ಮೃತದೇಹ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಹಾರದ 7 ಮಂದಿಯನ್ನು ಸೂರ್ಯನಗರ ಠಾಣೆ ಪೊಲೀಸರು ಬಿಹಾರದಿಂದ ಕರೆ ತಂದು ವಿಚಾರಣೆ ನಡೆಸುತ್ತಿದ್ದಾರೆ.



ಚಂದಾಪುರ ರೈಲ್ವೆ ಬ್ರಿಡ್ ಬಳಿ ಮೇ.21 ರಂದು ಸೂಟ್‌ಕೇಸ್ ಪತ್ತೆಯಾಗಿತ್ತು. ಆ ಸೂಟ್‌ಕೇಸ್ ಅನ್ನು ಪೊಲೀಸರು ಪರಿಶೀಲಿಸಿದಾಗ ಅದರಲ್ಲಿ 17 ವರ್ಷದ ಬಿಹಾರ ಮೂಲದ ಬಾಲಕಿಯ ಶವ ಇರುವುದು ಕಂಡು ಬಂದಿತ್ತು.

ಈ ಬಾಲಕಿ ಯಾರು,ಏತಕ್ಕಾಗಿ ಯಾರು ಕೊಲೆ ಮಾಡಿದ್ದಾರೆ ಎಂಬ ಬಗ್ಗೆ ಸೂರ್ಯನಗರ ಠಾಣೆ ಪೊಲೀಸರು ಮಾಹಿತಿ ಕಲೆ ಹಾಕುತ್ತಿದ್ದಾಗ ಕೊಲೆಯಾಗಿರುವ ಬಾಲಕಿ ಬಿಹಾರ ಮೂಲದ ರೀಮಾ ಎಂಬುವುದು ಗೊತ್ತಾಯಿತು.ಈ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿದ ಪೊಲೀಸರು, ಈ ಬಾಲಕಿಯನ್ನು ಬೇರೆ ಕಡೆ ಕೊಲೆ ಮಾಡಿ ಶವವನ್ನು ಸೂಟ್‌ಕೇಸ್‌ನಲ್ಲಿ ತುಂಬಿ ಚಂದಾಪುರ ರೈಲ್ವೆ ಬ್ರಿಡ್ಜ್ ಬಳಿ ತಂದು ಬಿಸಾಡಲಾಗಿದೆ ಎಂಬುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು ಇದೀಗ ಬಿಹಾರದ ನವಾಡ ಜಿಲ್ಲೆಯ 7 ಮಂದಿಯನ್ನು ಕರೆತಂದು ವಿಚಾರಣೆಗೆ ಒಳಪಡಿಸಿ ಈ ಬಾಲಕಿಯನ್ನು ಯಾರು, ಯಾವ ಕಾರಣಕ್ಕಾಗಿ ಕೊಲೆ ಮಾಡಿದ್ದಾರೆ ಎಂಬ ಮಾಹಿತಿಯನ್ನು ಪಡೆದುಕೊಳ್ಳುತ್ತಿದ್ದಾರೆ.

# ಕಾಂಗ್ರೆಸ್ ಹೈಕಮಾಂಡ್‌ಗೆ ಶೋಭಾ ಕರಂದ್ಲಾಜೆ ಬಹಿರಂಗ ಸವಾಲ್

**ಬೆಂಗಳೂರು,ಜೂ.7–** ಕಾಂಗ್ರೆಸ್ ಹೈಕಮಾಂಡ್‌ಗೆ ದಮು, ತಾಕತ್ತು ಇದ್ದರೆ ಚಿನ್ನಸ್ವಾಮಿ ಕ್ರಿಡಾಂಗಣದ ಕಾಲ್ತುಳಿತ ಪ್ರಕರಣ ಸಂಬಂಧ ಮುಖ್ಯಮಂತ್ರಿ ಹಾಗೂ ಉಪ 'ಮುಖ್ಯಮಂತ್ರಿ ಅವರಿಂದ ರಾಜೀನಾಮೆ ಪಡೆಯಲಿ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಬಹಿರಂಗ ಸವಾಲು ಹಾಕಿದರು.

ಪ್ರತಿಯೊಂದರಲ್ಲೂ ಮೂಗು ತೂರಿಸುವ ಕಾಂಗ್ರೆಸ್ ಹೈಕಮಾಂಡ್ ಇಷ್ಟೊಂದು ದೊಡ್ಡ ಘಟನೆ ನಡೆದಿದ್ದರೂ ಒಂದೇ ಒಂದು ಸಾಂತ್ವಾನವನ್ನೂ ಹೇಳಿಲ್ಲ. ಬದ'ಲಾಗಿ ಸರ್ಕಾರವನ್ನು, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಸಮರ್ಥಿಸಿಕೊಳ್ಳುತ್ತಿದೆ. ಅವರ ರಾಜೀನಾಮೆ ಪಡೆಯಲು ನಿಮಗೆ ಧಮು ತಾಕತ್ತು ಇಲ್ಲವೇ ಎಂದು ಪ್ರಶ್ನೆ ಮಾಡಿದರು. ಪಕ್ಷದ ಕಚೇರಿಯಲ್ಲಿ ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ ಅವರ ಜೊತೆ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಅವರು, ತಮ ಮಾತಿನುದ್ದಕ್ಕೂ ಕಾಂಗ್ರೆಸ್ ಸರ್ಕಾರ ಹಾಗೂ ಹೈಕಮಾಂಡ್ ವಿರುದ್ಧ ಬೆಂಕಿ ಉಗುಳಿದರು. ಈ ಪ್ರಕರಣಕ್ಕೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರೇ ನೇರ ಕಾರಣ. ಈ ಇಬ್ಬರು ತಮ ಸ್ಥಾನಕ್ಕೆ ಗೌರವಯುತವಾಗಿ ರಾಜೀನಾಮೆ ನೀಡಬೇಕು. ನಂತರ ತನಿಖಾಧಿಕಾರಿಗಳು ಇಬ್ಬರನ್ನು ಬಂಧಿಸಿ ವಿಚಾರಣೆಗೊಳಪಡಿಸಬೇಕೆಂದು ಒತ್ತಾಯಿಸಿದರು.

ಆರ್‌ಸಿಬಿ, ಡಿಎನ್‌ಎ ಮತ್ತಿತರರನ್ನು ತನಿಖಾಧಿಕಾರಿಗಳು ಬಂಧಿಸುವುದಾದರೆ ಸಿಎಂ ಮತ್ತು ಡಿಸಿಎಂ ಅವರುಗಳನ್ನು ಏಕೆ ಬಂಧಿಸಬಾರದು? ಈ ಪ್ರಕರಣದಲ್ಲಿ ಈ ಇಬ್ಬರೂ ಪ್ರಮುಖ ಆರೋಪಿಗಳಾಗಿದ್ದಾರೆ. ಎಲ್ಲದಕ್ಕೂ ಮೂಗು ತೂರಿಸುವ ಹೈಕಮಾಂಡ್‌ನವರು ಈಗ ಯಾಕೆ ಮೌನಕ್ಕೆ ಜಾರಿದ್ದಾರೆ? ಕಾಂಗ್ರೆಸ್ ಹೈಕಮಾಂಡ್ ನಾಯಕರು ಎಲ್ಲಿದ್ದೀರಪ್ಪ ಎಂದು ವ್ಯಂಗ್ಯವಾಡಿದರು. ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ, ಕೆ.ಸಿ.ವೇಣುಗೋಪಾಲ್, ಸುರ್ಜೆವಾಲ ಎಲ್ಲಿ ಹೋಗಿದ್ದಾರೆ? ನಿಮ ಕೈಗೆ ರಕ್ತ ಅಂಟಿಕೊಂಡಿದೆ. ಯಾವುದೇ ಕಾರಣಕ್ಕೂ ಅದನ್ನು ತೊಳೆದುಕೊಳ್ಳಲು ಸಾಧ್ಯವಿಲ್ಲ. ನಿಜವಾಗಿಯೂ ಎಐಸಿಸಿಗೆ ದಮು, ತಾಕತ್ತಿದ್ದರೆ ಸಿಎಂ-ಡಿಸಿಎಂ ವಿರುದ್ಧ ತನಿಖೆಗೆ ಆದೇಶಿಸಲಿ ಎಂದು ಸವಾಲು ಎಸೆದರು.

ಕರ್ನಾಟಕ ರಾಜ್ಯ ಶೋಕಾಚರಣೆಯಲ್ಲಿದೆ. ತಂದೆತಾಯಂದಿರು ಮಕ್ಕಳನ್ನು ಕಳೆದುಕೊಂಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಒಬ್ಬ ಹುಡುಗ ತೀರಿಕೊಂಡು, ತಾಯಿ ತಂದೆ ಇಬ್ಬರು ಡಿಪ್ರೆಶನ್‌ಗೆ ಹೋಗಿದ್ದಾರೆ, ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಕೈಯಲ್ಲಿ ರಕ್ತ ಅಂಟಿದೆ. ತಮ ಕೈಯಲ್ಲಿರುವ ರಕ್ತವನ್ನು ಪೊಲೀಸರ ಮೂತಿಗೆ ಒರೆಸುತ್ತಿದ್ದಾರೆ. ಒಬ್ಬ ಪ್ರಾಮಾಣಿಕ ಆಯುಕ್ತರಾಗಿದ್ದ ಬಿ.ದಯಾನಂದ್ ಅವರನ್ನು ಕಾರಣವಿಲ್ಲದೆ ಅಮಾನತು ಮಾಡಿದ್ದಾರೆ ಎಂದು ಕಿಡಿಕಾರಿದರು.

ಬೆಂಗಳೂರಿನ ಇತಿಹಾಸದಲ್ಲೆ ಇದೊಂದು ಕಪ್ಪು ಚುಕ್ಕೆ. ವಿಧಾನಸೌಧ ಇದುವರೆಗೂ ಇದ್ದಿದ್ದು ಪ್ರಮಾಣ ವಚನ ಕಾರ್ಯಕ್ರಮಕ್ಕಾಗಿ ಮಾತ್ರ. ಲೋಕೋಪಯೋಗಿಯವರು 25ರಿಂದ 35 ಜನರಿಗೆ ಮಾತ್ರ ಅವಕಾಶ ಎಂದಿದ್ದಾರೆ. ಆದರೆ ನಿಮ ಕುಟುಂಬದವರು, ಜಮಿರ್, ಸಿದ್ದರಾಮ ಯ್ಯ, ರಾಮಲಿಂಗರೆಡ್ಡಿ ಪರಿವಾರದವರೇ ವೇದಿಕೆಯಲ್ಲಿ ಇದ್ದರು ಎಂದು ವಾಗ್ದಾಳಿ ನಡೆಸಿದರು.

ಆರ್‌ಸಿಬಿ ವಿಜಯೋತ್ಸವವನ್ನು ಹೆಣದ ಮೇಲೆ ಮಾಡಿದ್ದೀರಿ. ಒಬ್ಬ ಜವಾಬ್ದಾರಿಯುತ ಸರ್ಕಾರ ಈ ರೀತಿ ಮಾಡಬಹುದೇ? ನಮ ಪೊಲೀಸರು ಹಿಂದಿನ



ಮಧ್ಯರಾತ್ರಿವರೆಗೂ ಕೆಲಸ ಮಾಡಿದ್ದಾರೆ. ನೀವು ಅನುಮತಿ ಕೊಟ್ಟಿಲ್ಲ ಅಂದರೆ ಹೇಗೆ ಎರಡು ಆಚರಣೆ ಸಾಧ್ಯ ಎಂದು ಪ್ರಶ್ನಿಸಿದರು.ಆರ್‌ಸಿಬಿ ವಿಜಯೋತ್ಸವಕ್ಕೆ ಅವ'ಕಾಶ ಕೊಟ್ಟಿದ್ದರೆ ಪೊಲೀಸರನ್ನು ಯಾಕೆ ಅಮಾನತು ಮಾಡಿದ್ದೀರಾ..? ಚಿನ್ನಸ್ವಾಮಿ ಕ್ರಿಡಾಂಗಣದಲ್ಲಿ ಮೂರು ಗೇಟ್ ಮಾತ್ರ ತೆಗೆದಿದ್ದು, ಜನರು ಸೇರಿದಾಗ ಯಾಕೆ ಗೇಟ್‌ಗಳನ್ನು ಓಪನ್ ಮಾಡಲಿಲ್ಲ. ಮಾತು ಎತ್ತಿದರೆ ಪ್ರಯಾಗ್‌ನಲ್ಲಿ ಆಗಿಲ್ಲವೇ ಎನ್ನುತ್ತಾರೆ.

66 ಕೋಟಿಗೂ ಹೆಚ್ಚು ಪ್ರಯಾಗ್‌ರಾಜ್‌ಗೆ ಬಂದಿದ್ದಾರೆ. ಆದರೆ ನೀವು ಕೇವಲ ಎರಡು ಲಕ್ಷ ಜನರ ನಿಯಂತ್ರಣ ಮಾಡುವುದಕ್ಕೆ ಆಗಿಲಿಲ್ಲವೇ? ಎಂದು ಪ್ರಶ್ನಿಸಿದರು. ನಟ ಪುನೀತ್ ರಾಜ್‌ಕುಮಾರ್ ಅವರು ತೀರಿಕೊಂಡಾಗಲೂ, ಮುಂಜಾಗ್ರತಾ ಕ್ರಮ ವಹಿಸದೇ ಅಂತ್ಯಕ್ರಿಯೆಗೆ ಮಾಡಲಾಗಿತ್ತು. ಕೇವಲ ನಿಮ ಪ್ರಚಾರದ ಹುಚ್ಚಿಗಾಗಿ ಕರ್ನಾಟಕ ಹನ್ನೊಂದು ಮಕ್ಕಳು ಬಲಿಯಾಗಿದ್ದಾರೆ ಎಂದು ಆರೋಪಿಸಿದರು. ಪ್ರಕರಣ ಕುರಿತು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮೈಕೆಲ್ ಡಿ ಕುನ್ಹಾ ಅವರಿಗೆ ಯಾಕೆ ತನಿಖೆ ವಹಿಸಿದ್ದೀರಿ? ಈಗಾಗಲೇ ಅವರು ಕೋವಿಡ್ ಬಗ್ಗೆ ತನಿಖೆ ಮಾಡುತ್ತಿದ್ದಾರೆ. ಮತ್ತೆ ಅವರಿಗೆ ಕೊಟ್ಟಿರುವುದು ಪ್ರಕರಣವನ್ನು ಮುಚ್ಚಿಹಾಕಲು ಎಂದು ಅನುಮಾನ ವ್ಯಕ್ತಪಡಿಸಿದರು.

# ಚಿನ್ನಸ್ವಾಮಿ ಸ್ಟೇಡಿಯಂಗೆ ಬಿಬಿಎಂಪಿ ನೋಟೀಸ್




**ಬೆಂಗಳೂರು, ಜೂ.7–** ಕಳೆದ ಹಲವಾರು ವರ್ಷಗಳಿಂದ ಜಾಹೀರಾತು ತೆರಿಗೆ ಪಾವತಿಸದೆ ಕಳ್ಳಾಟವಾಡುತ್ತಿದ್ದ ಕೆಎಸ್‌ಸಿಎಗೆ ಬಿಬಿಎಂಪಿ ನೋಟೀಸ್ ಜಾರಿ ಮಾಡಿದೆ. ಯಾವುದೇ ಕ್ರಿಡಾಂಗಣದ ಒಳಭಾಗ ಹಾಗೂ ಹೊರಭಾಗಗಳಲ್ಲಿ ಜಾಹೀರಾತು ಪ್ರದರ್ಶಿಸಿದರೆ ಕಾನೂನಿನಂತೆ ಅವರು ಬಿಬಿಎಂಪಿಯವರಿಗೆ ತೆರಿಗೆ ಪಾವತಿಸಬೇಕು.

ಆದರೆ, ಕಳೆದ ಹಲವಾರು ವರ್ಷಗಳಿಂದ ಚಿನ್ನಸ್ವಾಮಿ ಕ್ರಿಡಾಂಗಣದಲ್ಲಿ ಜಾಹೀರಾತು ಆಳವಡಿಸಿಕೊಂಡು ಬರಲಾಗುತ್ತಿದೆ. ಪ್ರದರ್ಶನವಾಗುವ ಜಾಹೀರಾತಿಗೆ ತೆರಿಗೆ ನೀಡಿ ಎಂದರೆ ಕೆಎಸ್‌ಸಿಎ ಅವರು ಕಿವಿ ಮೇಲೆ ಹಾಕಿಕೊಳ್ಳುತ್ತಿರಲಿಲ್ಲ. ನೋಟೀಸ್ ನೀಡಿದರೂ ಡೋಂಟ್ ಕೇರ್ ಎನ್ನುತ್ತಿದ್ದರು. ಕ್ರಿಕೆಟ್ ಸಂಸ್ಥೆಯವರ ಈ ಧೋರಣೆಯಿಂದ ಬಿಬಿಎಂಪಿಗೆ ಹತ್ತಾರು ಕೋಟಿ ರೂ.ಗಳ ನಷ್ಟ ಸಂಭವಿಸಿತ್ತು. ಇದೀಗ ಸಿಕ್ಕ ಅವಕಾಶವನ್ನು ಸದುಪಯೋಗ ಪಡಿಸಿಕೊಂಡಿರುವ ಪಾಲಿಕೆ ಅಧಿಕಾರಿಗಳು ಬಾಕಿ ತೆರಿಗೆ ಪಾವತಿಸುವಂತೆ ಮತ್ತೊಂದು ನೋಟೀಸ್ ನೀಡಿ ಬಿಸಿ ಮುಟ್ಟಿಸಿದ್ದಾರೆ.

ಕಳೆದ ಹಲವು ವರ್ಷಗಳಿಂದ ಮ್ಯಾಚ್ ನಡೆಯುವಾಗ ಎಲ್‌ಇಡಿ ಸೇರಿದಂತೆ ಅನೇಕ ಜಾಹೀರಾತು ಬೋರ್ಡ್ ಗಳು ಚಿನ್ನಸ್ವಾಮಿ ಕ್ರಿಡಾಂಗಣಕ್ಕೆ ಅಳವಡಿಕೆ ಮಾಡಿ ಅನಧಿಕೃತವಾಗಿ ಜಾಹೀರಾತು ಪ್ರದರ್ಶಿಸುತ್ತಿದ್ದೀರಿ. ಪಾಲಿಕೆಯಿಂದ ಜಾಹೀರಾತು ಅಳವಡಿಕೆಗೆ ಅನುಮತಿ ಪಡೆದಿಲ್ಲ ಇದು ಕೂಡ ಕಾನೂನು ಬಾಹಿರ.

ಈ ಬಗ್ಗೆ ಈಗಾಗಲೇ ನೋಟೀಸ್ ಕೊಟ್ಟಿದ್ರು ಉತ್ತರ ನೀಡುತ್ತಿಲ್ಲ ಎಂದು ನೋಟೀಸ್‌ನಲ್ಲಿ ಎಚ್ಚರಿಸಲಾಗಿದೆ. ಜಾಹೀರಾತು ಶುಲ್ಕದ ಜೊತೆ ದಂಡದ ಪ್ರಯೋಗಕ್ಕೂ ಮುಂದಾಗಿರುವ ಬಿಬಿಎಂಪಿ ಅಧಿಕಾರಿಗಳು ಈ ಬಾರಿ ಶುಲ್ಕ ಪಾವತಿಸದಿದ್ದರೆ ದಂಡ ವಿಧಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

# ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಜಾತಿ ಜನಗಣತಿ ವರದಿ ಜಾರಿ ಕುರಿತು ತೀರ್ಮಾನ



**ಬೆಂಗಳೂರು,ಜೂ.7–** ಜಾತಿ ಜನಗಣತಿಯ ಕುರಿತಂತೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಗಳಿದ್ದು, ವಿವಾದ ಮತ್ತೊಂದು ಮಜಲು ಪಡೆಯುವ ನಿರೀಕ್ಷೆಗಳಿವೆ.

ಉನ್ನತ ಮೂಲಗಳ ಪ್ರಕಾರ, ಜಾತಿ ಜನಗಣತಿಯ ವರದಿ ಅನುಷ್ಠಾನಕ್ಕೆ ರಾಜ್ಯಸರ್ಕಾರ ಮುಂದಾಗಿದೆ. ಕೆಲವರು ಏಕಾಏಕಿ ನಿರ್ಧಾರ ತೆಗೆದುಕೊಳ್ಳುವುದು ಬೇಡ. ವಾಸ್ತವಾಂಶಗಳನ್ನು ಅಧ್ಯಯನ ಮಾಡಲು ಉಪ ಸಂಪುಟದ ಸಮಿತಿ ರಚನೆ ಮಾಡಿ ವರದಿಯ ಬಳಿಕ ಕ್ರಮ ಕೈಗೊಳ್ಳಬೇಕು ಎಂದು ಒತ್ತಡ ಹಾಕುತ್ತಿರುವುದಾಗಿ ತಿಳಿದುಬಂದಿದೆ. ಆದರೆ ಸಂಪುಟದ ಮುಕ್ಕಾಲು ಭಾಗ ಸಚಿವರು ವರದಿ ಜಾರಿಯಾಗಬೇಕು ಎಂದು ಹಠ ಹಿಡಿದಿದ್ದಾರ ಎನ್ನಲಾಗಿದೆ.

ಕೇಂದ್ರ ಸರ್ಕಾರ ಜನಗಣತಿಯೊಂದಿಗೆ ಜಾತಿ ಗಣತಿ ನಡೆಸಲು ಮುಂದಾಗಿದೆ. ಹೀಗಾಗಿ ರಾಜ್ಯಸರ್ಕಾರ ನಡೆಸಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷಾ ವರದಿ ಅಸಂವಿಧಾನಿಕ ಅಥವಾ ಜನವಿರೋಧಿ ಎಂದು ಹೇಳಲು ವಿರೋಧಪಕ್ಷಗಳಿಗೆ ಸೂಕ್ತ ಆಧಾರವಿಲ್ಲ. ಒಂದು ರೀತಿ ಆ ರೀತಿ ಹೇಳಿದರೆ ಉತ್ತರ ನೀಡಲು ನಮಗೂ ಇದು ಸೂಕ್ತ ಸಮಯ. ಹೀಗಾಗಿ ವಿಳಂಬ ಮಾಡದೇ ಸಮೀಕ್ಷಾ ವರದಿಯನ್ನು ಅನುಷ್ಠಾನಕ್ಕೆ ತರಬೇಕು ಎಂದು ಸಚಿವರು ಒತ್ತಡ ಹೇರುತ್ತಿದ್ದಾರೆ ಎನ್ನಲಾಗಿದೆ.ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯಗಳು ವರದಿಯನ್ನು ನೇರವಾಗಿ ವಿರೋಧಿಸಿದ್ದು ಇದನ್ನು ಅನುಷ್ಠಾನಗೊಳಿಸಿದರೆ ತೀವ್ರ ಸ್ವರೂಪದ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದೆ. ಅದರ ನಡುವೆಯೂ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದಿಟ್ಟ ನಿರ್ಧಾರ ತೆಗೆದುಕೊಳ್ಳಲು ಮುಂದಾಗಿದ್ದಾರೆ.

ಪರಿಶಿಷ್ಟ ಜಾತಿಗಳಲ್ಲಿನ ಒಳಮೀಸಲಾತಿ ವಿಚಾರವಾಗಿ ಸೂಕ್ತ ನಿರ್ಧಾರವಾಗದಿದ್ದ ಹಿನ್ನಲೆಯಲ್ಲಿ ಸರ್ಕಾರದ ನೇಮಕಾತಿಗಳು, ಬಡ್ತಿ ಪ್ರಕ್ರಿಯೆಗಳು ನೆನೆಗುದಿಗೆ ಬಿದ್ದಿವೆ. ಈ ಹಂತದಲ್ಲಿ ಜಾತಿಜನಗಣತಿಯ ಅನುಷ್ಠಾನಕ್ಕೆ ಮುಂದಾದರೆ ಮತ್ತಷ್ಟು ಗೊಂದಲಗಳಾಗುತ್ತವೆ. ಮೀಸಲಾತಿ ಪರಿಷ್ಕರಣೆಯಾಗಬೇಕು ಎಂಬ ಬೇಡಿಕೆ ಹೆಚ್ಚಾಗುತ್ತದೆ. ಮೀಸಲಾತಿ ಪರಿಷ್ಕರಣೆ ಸದ್ಯಕ್ಕೆ ಬಗೆಹರಿಯುವ ವಿಷಯವಲ್ಲ.ಜಾತಿ ಜನಗಣತಿ ವರದಿ ಅನುಷ್ಠಾನವಾಗಲಿದೆ ಎಂಬ ಚರ್ಚೆಯಾಗುತ್ತಿದ್ದಂತೆ ಮೀಸಲಾತಿ ಪರಿಷ್ಕರಣೆಯಾಗಬೇಕೆಂಬ ಬೇಡಿಕೆಯೂ ತೀವ್ರಗೊಳ್ಳುತ್ತದೆ. ಇದರಿಂದಾಗಿ ನೇಮಕಾತಿಗಳು ಹಾಗೂ ಬಡ್ತಿಗಳಿಗೆ ತೊಂದರೆಯಾಗುತ್ತದೆ. ಸದ್ಯಕ್ಕೆ ಸಚಿವ ಸಂಪುಟ ಉಪಸಮಿತಿ ರಚಿಸಿ ವಿಷಯವನ್ನು ಮುಂದೂಡುವುದು ಒಳ್ಳೆಯದು ಎಂದು ಕೆಲವರು ಸಲಹೆ ನೀಡಿದ್ದಾರೆ.

ಕಳೆದ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ವಿಚಾರ ಚರ್ಚೆಯಾಗಬೇಕಾಗಿತ್ತು. ಆದರೆ ಚಿನ್ನಸ್ವಾಮಿ ಕ್ರಿಡಾಂಗಣದಲ್ಲಿ ನಡೆದ ಕಾಲ್ತುಳಿತ ಪ್ರಕರಣದಿಂದಾಗಿ ಶೋಕಮಯ ವಾತಾವರಣವಿದ್ದುದ್ದರಿಂದ ಜಾತಿ ಜನಗಣತಿಯ ತಂಟೆಗೆ ಹೋಗದಿರಲು ಸರ್ಕಾರ ನಿರ್ಧರಿಸಿದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದು ಅನಿವಾರ್ಯ ಎಂಬ ಸಂದೇಶವನ್ನು ರವಾನಿಸಲಾಗಿದೆ.

ಜಾತಿ ಜನಗಣತಿಗೆ ಸಂಬಂಧಪಟ್ಟಂತ ಎಲ್ಲಾ ಸಚಿವರೂ ಲಿಖಿತ ಅಭಿಪ್ರಾಯ ನೀಡುವಂತೆ ಮುಖ್ಯಮಂತ್ರಿ ಸೂಚನೆ ನೀಡಿದ್ದರು. ಆದರೆ ಬಹುತೇಕ ಸಚಿವರು ಇನ್ನೂ ತಮ ವರದಿ ನೀಡಿಲ್ಲ ಎಂದು ಹೇಳಲಾಗಿದೆ. ಅಂತಹ ಸಚಿವರಿಗೆ ಶೀಘ್ರದಲ್ಲಿ ಲಿಖಿತ ಅಭಿಪ್ರಾಯ ನೀಡುವಂತೆ ಮುಖ್ಯಮಂತ್ರಿ ಕಚೇರಿ ಒತ್ತಡ ಹಾಕುತ್ತಿರುವುದಾಗಿಯೂ ತಿಳಿದುಬಂದಿದೆ.

# ಭಾರತ ಜಗತ್ತಿನಲ್ಲಿ ನಂ.1 ದೇಶವಾಗಬೇಕು: ಜೋಶಿ



**ಮೈಸೂರು: ಜೂ.07:–** ಭಾರತ ಜಗತ್ತಿನಲ್ಲಿ ನಂಬರ್ ಒನ್ ದೇಶ ಆಗಬೇಕೆಂದು ಕೇಂದ್ರ ಸಚಿವ ಪ್ರಹಲ್ಲಾದ ಜೋಶಿ ಅವರು ಆಶಿಸಿದರು. ಅವಧೂತದತ್ತ ಪೀಠದಲ್ಲಿ ಇಂದಿನಿಂದ ಪ್ರಾರಂಭವಾಗಿರುವ ವಿಶ್ವದ ಮೊಟ್ಟಮೊದಲ ಸಹಸ್ರ ಚಂಡಿ ಯಾಗ ಮತ್ತು ವನದುರ್ಗ ವೃಕ್ಷ ಶಾಂತಿ ಮಹಾಯಜ್ಞ ಪುಜಾ ಕಾರ್ಯದಲ್ಲಿ ಭಾಗವಹಿಸಿದ ನಂತರ ಮಾತನಾಡಿದರು.

ಅನೇಕ ವಿಷಯದಲ್ಲಿ ಭಾರತ ಜಗತ್ತಿನಲ್ಲಿ ಈಗ ನಾಲ್ಕನೇ ಸ್ಥಾನದಲ್ಲಿದೆ, ಆರ್ಥಿಕ ವಿಷಯದಲ್ಲೂ 4ನೇ ಸ್ಥಾನಕ್ಕೆ ಬಂದಿದ್ದೇವೆ. ನಮ್ಮ ದೇಶ ನಂಬರ್ ಒನ್ ಸ್ಥಾನಕ್ಕೆ ಬರಬೇಕು. ಅದಕ್ಕಾಗಿ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಆಶೀರ್ವಾದ ಸದಾ ನಮ್ಮೆಲ್ಲರ ಮೇಲೆ ಇರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಗತ್ತಿನಲ್ಲಿ ಶಾಂತಿ ನೆಮ್ಮದಿ ಮತ್ತು ಸೃಷ್ಟಿಯ ಜತೆಗೆ ಸಮತೋಲನ ಇರಬೇಕು ಹಾಗಾಗಿ ದೇಶ ಬಲಾಢ್ಯ ಆಗಬೇಕು ಎಂದು ಜೋಶಿ ಅಭಿಪ್ರಾಯಪಟ್ಟರು.ಗಣಪತಿ ಶ್ರೀಗಳು 14 ದಿನಗಳ ಕಾಲ ಸಹಸ್ರ ಚಂಡಿಯಾಗ ಮತ್ತು ವನದುರ್ಗ ವೃಕ್ಷ ಶಾಂತಿ ಮಹಾ ಯಜ್ಞವನ್ನು ನಮ್ಮೆಲ್ಲರ ಮನಸ್ಸಿಗೆ ನಾಟುವಂತೆ, ಭಕ್ತಿಯ ಭಾವ ವೃದ್ಧಿಯಾಗುವಂತೆ ಆಧ್ಯಾತ್ಮಿಕ ಮನಸ್ಸು ಉದ್ದೀಪನ ಆಗುವಂತೆ ಈ ಕಾರ್ಯಕ್ರಮ ಮಾಡುತ್ತಿದ್ದಾರೆ ಒಂಬತ್ತು ಸಾವಿರ ಪೂಜನೀಯ ವೃಕ್ಷಗಳಿಂದ ಪೂಜೆ ಮಾಡಲಾಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.ಪ್ರಹ್ಲಾದ ಜೋಶಿಯವರೊಂದಿಗೆ ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರ ಅಧ್ಯಕ್ಷ ಎಲ್.ನಾಗೇಂದ್ರ ಮತ್ತು ಜೋಗಿ ಮಂಜು ಮತ್ತಿತರರು ಹಾಜರಿದ್ದರು.

# ಮೇ ತಿಂಗಳಿನಲ್ಲಿ ರಾಜ್ಯದ ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಏರಿಕೆ

**ಬೆಂಗಳೂರು, ಜೂ.7–** ಮೇ ತಿಂಗಳಿನಲ್ಲಿ 8913.05 ಕೋಟಿ ರೂ. ರಾಜ್ಯದ ವಾಣಿಜ್ಯ ತೆರಿಗೆಗಳ ಸಂಗ್ರಹವಾಗಿದೆ. ಇದು ಏಪ್ರಿಲ್ ತಿಂಗಳಿನಿಂದ 352.19 ಕೋಟಿ ರೂ. ಹೆಚ್ಚು ಸಂಗ್ರಹವಾಗಿದೆ. 2024ರ ಮೇ ತಿಂಗಳಿನಲ್ಲಿ 7453.94 ಕೋಟಿ ರೂ. ವಾಣಿಜ್ಯ ತೆರಿಗೆಗಳ ಸಂಗ್ರಹವಾಗಿತ್ತು. 1459.11 ಕೋಟಿ ರೂ.ನಷ್ಟು ಕಳೆದ ವರ್ಷಕ್ಕಿಂತ ಹೆಚ್ಚು ಸಂಗ್ರಹವಾಗಿದೆ. ಆದರೆ ಏಪ್ರಿಲ್ ತಿಂಗಳಿನಲ್ಲಿ ಕಳೆದ ವರ್ಷಕ್ಕಿಂತ ಕಡಿಮೆ ತೆರಿಗೆ ಸಂಗ್ರಹಿಸಲಾಗಿತ್ತು.

ಏಪ್ರಿಲ್–ಮೇ ತಿಂಗಳಿನಲ್ಲಿ ಒಟ್ಟು 17,473.91 ಕೋಟಿ ರೂ. ಸಂಗ್ರಹವಾಗಿದೆ. ಇದರಲ್ಲಿ 12,828.09 ಕೋಟಿ ರೂ. ಸರಕು ಸೇವಾ ತೆರಿಗೆ, 4,319.51 ಕೋಟಿ ರೂ. ಕರ್ನಾಟಕ ಮಾರಾಟ ತೆರಿಗೆ ಹಾಗೂ 326.31 ಕೋಟಿ ರೂ. ವೃತ್ತಿ ತೆರಿಗೆ ಸೇರಿದೆ.


ಮೇ ತಿಂಗಳಿನಲ್ಲಿ 6,467.63 ಕೋಟಿ ರೂ. ಸರಕು ಸೇವಾ ತೆರಿಗೆ, 2318.39 ಕೋಟಿ ರೂ. ಮಾರಾಟ ತೆರಿಗೆ ಹಾಗೂ 126.83 ಕೋಟಿ ರೂ. ವೃತ್ತಿ ತೆರಿಗೆ ಸಂಗ್ರಹಿಸಲಾಗಿದ್ದು, ಏಪ್ರಿಲ್‌ಗಿಂತ ಮ ತಿಂಗಳಿನಲ್ಲಿ ಸರಕು ಸೇವಾ ತೆರಿಗೆ ಮತ್ತು ಮಾರಾಟ ತೆರಿಗೆಯಲ್ಲಿ ಏರಿಕೆ ಕಂಡು ಬಂದರೆ, ವೃತ್ತಿ ತೆರಿಗೆಯಲ್ಲಿ ಇಳಿಕೆಯಾಗಿದೆ.

2024–25ನೇ ಆರ್ಥಿಕ ಸಾಲಿನಲ್ಲಿ ಒಟ್ಟು 1,02,585.52 ಕೋಟಿ ರೂ. ವಾಣಿಜ್ಯ ತೆರಿಗೆಗಳನ್ನು ಸಂಗ್ರಹಿಸಲಾಗಿತ್ತು. ಈ ಬಾರಿ ಇದಕ್ಕಿಂತಲೂ ಹೆಚ್ಚು ಸಂಗ್ರಹ ಮಾಡುವ ಗುರಿಯನ್ನು ವಾಣಿಜ್ಯ ತೆರಿಗೆ ಇಲಾಖೆ ಹಾಕಿಕೊಂಡಿದೆ.

# ಬೇಹುಗಾರಿಕೆ ಮಾಡಿದ ಯೂಟ್ಯೂಬರ್ ಜೊತೆ ಪಾಕ್‌ನ ಮಾಜಿ ಎಸ್‌ಐ ಲಿಂಕ್

**ನವದೆಹಲಿ, ಜೂ. 7–** ಇತ್ತಿಚೆಗೆ ಬೇಹುಗಾರಿಕೆ ಆರೋಪದ ಮೇಲೆ ಬಂಧಿಸಲ್ಪಟ್ಟ ಪಂಜಾಬಿ ಯೂಟ್ಯೂಬರ್ ಜಸ್ಬಿರ್ ಸಿಂಗ್ ಅವರು, ಬೇಹುಗಾರಿಕೆ ದಂಧೆಯಲ್ಲಿ ಪಾಕಿಸ್ತಾನದ ಮಾಜಿ ಪೊಲೀಸ್ ಅಧಿಕಾರಿಯೊಬ್ಬರ ಭಾಗಿಯಾಗಿರುವುದನ್ನು ಬಹಿರಂಗ'ಪಡಿಸಿದ್ದಾರೆ.

ಪಾಕಿಸ್ತಾನದ ಮಾಜಿ ಸಬ್–ಇನ್ಸ್ ಪೆಕ್ಟರ್ ನಾಸಿರ್ ಧಿಲ್ಲೋನ್ ಬೇಹುಗಾರಿಕೆ ಕಾರ್ಯಾಚರಣೆಯ ಹಿಂದಿನ ಮಾಸ್ಟರ್ ಮೈಂಡ್‌ಗಳಲ್ಲಿ ಒಬ್ಬರು ಎಂದು ಜಸ್ಬಿರ್ ಬ



ಹಿರಂಗಪಡಿಸಿದ್ದಾರೆ. ಈಗ ಪಾಕಿಸ್ತಾನದ ಯೂಟ್ಯೂಬರ್ ಆಗಿರುವ ಧಿಲ್ಲೋನ್, ಜಸ್ಬಿರ್‌ರನ್ನು ಲಾಹೋರ್‌ನಲ್ಲಿರುವ ಪಾಕಿಸ್ತಾನದ ಇಂಟರ್–ಸರ್ವಿಸಸ್ ಇಂಟೆಲಿಜೆನ್ಸ್ (ಐಎಸ್‌ಐ) ಅಧಿಕಾರಿಗಳಿಗೆ ಪರಿಚಯಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಜಸ್ಬಿರ್ ಮತ್ತು ಪಾಕಿಸ್ತಾನಕ್ಕಾಗಿ ಬೇಹುಗಾರಿಕೆ ನಡೆಸುತ್ತಿದ್ದ ಆರೋಪದ ಮೇಲೆ ಬಂಧಿಸಲ್ಪಟ್ಟ ಮತ್ತೊಬ್ಬ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ 10 ದಿನಗಳ ಕಾಲ ಲಾಹೋರ್‌ನಲ್ಲಿ ಒಟ್ಟಿಗೆ ಇದ್ದರು ಎಂದು ಹೇಳಿದರು

# ಹೆಲ್ಮೆಟ್ ಗೆ ಬಳ್ಳಾರಿಯಲ್ಲಿ ವಿನಾಯ್ತಿ ಇಲ್ಲ: ಎಸ್ಪಿ



**ಬಳ್ಳಾರಿ, ಜೂ.07–** ಸುಪ್ರೀಂ ಕೋರ್ಟಿನ ಆದೇಶದಂತೆ ದೇಶದಲ್ಲಿ ಬೈಕ್ ಸವಾರರಿಗೆ ಹೆಕ್ಮೆಟ್ ವಿನಾಯ್ತಿ ಇಲ್ಲ. ಬೇಸಿಗೆ ಬಿಸಿಲೆಂದು ಬಳ್ಳಾರಿಗೂ ವಿನಾಯ್ತಿ ಇಲ್ಲ. ಅದಕ್ಕಾಗಿ ಜಿಲ್ಲೆಯಲ್ಲಿ ಎಲ್ಲಾ ಬೈಕ್ ಸವಾರರು ಹೆಲ್ಮೆಟ್ ಹಾಕಲೇ ಬೇಕು ಎಂದು ಎಸ್ಪಿ ಡಾ. ಶೋಭಾರಾಣಿ ಹೇಳಿದ್ದಾರೆ.

ಅವರು ಇಂದು ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಟಿ ನಡೆಸಿ. ಹೆಲ್ಮೆಟ್ ಧರಸದೇ ಇರುವ ಸವಾರರೇ ಅಪಘಾತಗಳಲ್ಲಿ ಸಾವನ್ನಪ್ಪಿದ್ದಾರೆ. ಅಲ್ಲದೆ ಅತಿ ವೇಗ ಮತ್ತಿತರ ಕಾರಣಗಳಿಂದಲೂ ಅಪಘಾತ ಆಗುತ್ತಿವೆ. ಅದಕ್ಕಾಗಿ ಹೆಲ್ಮೆಟ್ ಕಡ್ಡಾಯ ಮಾಡುತ್ತಿದೆ.

ಯಾವುದೇ ಒತ್ತಡಗಳಿಗೆ ಮಣಿಯದೆ ಇದನ್ನು ಜಾರಿಗೆ ತರಲಿದೆ. ಎಲ್ಲರೂ ಹೆಲ್ಮೆಟ್ ಬಳಸಬೇಕು ಎಲ್ಲಾ ಇಲಾಖೆಗಳ ನೌಕರರಿಗೂ ಅರಿವು ಮೂಡಿಸಲು ಸಭೆ ನಡೆಸಲಿದೆ. ಯಾರು ಬಳಸಲ್ಲ ಅವರಿಗೆ 500 ರೂ ದಂಡ ಹಾಕಲಿದೆಂದು ತಿಳಿಸಿದರು.

ಸಂಚಾರಿ ಪೊಲೀಸರ ಬಳಿ 7 ಜನರ ಬಳಿ ಬಾಡಿ ಕೆಮೆರಾ ಇದೆ ಅದನ್ನು ಉಪಯೋಗಿಸುತ್ತಿದ್ದಾರೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.ಜೈಲಿನಲ್ಲಿ ಮೊಬೈಲ್ ತರಂಗಗಳಿಗೆ ಜಾಮರ್ ಅಳವಡಿಸಿರುವುದರಿಂದ ಜೈಲ್ ಸುತ್ತಮುತ್ತ 300 ಮೀಟರ್ಸ್ ಇದೆ, ಇದನ್ನು 100 ಮೀಟರ್ಸ್ ಗೆ ಇಳಿಸಲು ಹೇಳಿದೆ, ತರ್ಡ್ ಪಾರ್ಟಿಯ ಸಭೆಯಲ್ಲಿ ಈ ಬಗ್ಗೆ ತಿಳಿಸಲಿದೆ ನಮ್ಮ ಇಲಾಖೆಗೂ ಒಂದಿಷ್ಟು ಸಮಸ್ಯೆ ಇದೆ ಎಂದರು.

**ಪ್ರಕರಣ ದಾಖಲು:** ಹೆಲ್ಮೆಟ್ ಇಲ್ಲದೆ ಬೈಕ್ ಓಡಿಸಿದವರ ಮೇಲೆ ನಿರಂತರವಾಗಿ ಪ್ರಕರಣ ದಾಖಲಿಸಲಾಗುತ್ತಿದೆ.

ಕಳೆದ 2022 ರಲ್ಲಿ 13196 ಪ್ರಕರಣ ದಾಖಲಿಸಿದ್ದರೆ 23 ರಲ್ಲಿ–6971, 2024 ರಲ್ಲಿ –6557 ಮತ್ತು 2025 ರಲ್ಲಿ ಕಳೆದ ಎಪ್ರಿಲ್ ವರೆಗೆ 2655 ಪ್ರಕರಣ ದಾಖಲಿಸಿ ದಂಡ ವಸೂಲಿ ಮಾಡಿದೆಂದು ತಿಳಿಸಿದರು. ಸುದ್ದಿಗೋಷ್ಟಿಯಲ್ಲಿ ಹೆಚ್ಚುವರಿ ಎಸ್ಪಿ ರವಿಕುಮಾರ್, ನಟರಾಜ್ ಟ್ರಾಫಿಕ್ ಇನ್ಸ್‌ಪೆಕ್ಟರ್ ಅಯ್ಯನಗೌಡ ಇದ್ದರು

# ಕಾಲ್ತುಳಿತಕ್ಕೆ ಡಿಸಿಎಂ ಹೊಣೆ: ಅಶೋಕ ಬಗಲಿ



**ಕಲಬುರಗಿ,ಜೂ.7–** ವಿಧಾನಸೌಧ ಮುಂದೆಯೇ ಸರ್ಕಾರದ ಆಡಳಿತ ಯಂತ್ರ ಬೀಡು ಬಿಟ್ಟಿತ್ತು. ಆದರೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಬಹು ಸಂಖ್ಯೆಯಲ್ಲಿ ಸೇರಿದ್ದ ಆರ್‌ಸಿಬಿ ಅಭಿಮಾನಿಗಳಿಗೆ ಸೂಕ್ತ ಬಿಗಿ ಬಂದೋಬಸ್ತ್ ಕೈಗೊಳ್ಳದೇ ನಿರ್ಲಕ್ಷ್ಯ ತೋರಿರುವುದು ಕಾಂಗ್ರೆಸ್ ಸರ್ಕಾರದ ವೈಫಲ್ಯವನ್ನು ಜಗಜ್ಜಾಹೀರುಗೊಳಿಸಿದೆ.

ಕಾಲ್ತುಳಿತ ದುರಂತದಲ್ಲಿ 11 ಜನರ ಸಾವಿಗೆ ಡಿಸಿಎಂ ಡಿ.ಕೆ,ಶಿವಕುಮಾರ ಅವರೇ ನೇರ ಹೊಣೆ ಹೊರಬೇಕು ಎಂದು ಆಗ್ರಹಿಸಿದೆ. ಇದನ್ನೂ ಕಾಲ್ತುಳಿತದಲ್ಲಿ 11 ಮಂದಿ ಸಾವು ಪರೀಕ್ಷೆ ವರದಿಯಲ್ಲಿ ಏನಿದೆ? ಮರಣೋತ್ತರ ಆರ್‌ಸಿಬಿ ಗೆಲುವಿನಲ್ಲಿ ಪ್ರಚಾರ ಪಡೆಯಲು ಹೋಗಿ ಹಲವರ ಉಸಿರು ನಿಲ್ಲಿಸಿದ ಡಿಸಿಎಂ ಡಿಕೆ ಶಿವಕುಮಾರ್‌ಗೆ ಸಾರ್ವಜನಿಕರಿಂದ ಧಿಕ್ಕಾರ ವ್ಯಕ್ತವಾಗುತ್ತಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿಯೇ ಆರ್‌ಸಿಬಿ ತಂಡದ ಆಟಗಾರರಿಗೆ ಸನ್ಮಾನ ಕಾರ್ಯಕ್ರಮ ಮಾಡಬಹುದಿತ್ತು. ಅದನ್ನು ಬಿಟ್ಟು ಕಾಂಗ್ರೆಸ್ ಸರ್ಕಾರ ವಿಧಾನಸೌಧದ ಮುಂದೆ ಆತುರಾತುರವಾಗಿ ಕಾರ್ಯಕ್ರಮ ಆಯೋಜಿಸಿ ಆರ್‌ಸಿಬಿ ತಂಡದ ಜೊತೆ ಸಿಎಂ, ಡಿಸಿಎಂ ಮತ್ತು ಸಚಿವರು ಮತ್ತವರ ಮಕ್ಕಳ ಫೋಟೋಶೂಟ್ ಶೋಕಿಗೆ ಮುಗ್ಧರು ಪ್ರಾಣ ಕಳೆದುಕೊಂಡಿರುವುದು ಘೋರ ದುರಂತ.

ಇದನ್ನೂ ಟೀಂ ಇಂಡಿಯಾದ್ದು 5 ದಿನ, ಸಿಎಸ್‌ಕೆ 3 ದಿನದ ನಂತರ ಆಚರಣೆ ಮಾಡಿದ್ರೆ ಒಂದೇ ದಿನದಲ್ಲಿ ವಿಜಯೋತ್ಸವ ಆಚರಿಸಿದ್ದು ಯಾಕೆ? ಎಂದು ಅಶೋಕ್ ಬಗಲಿ ಬಿಜೆಪಿ ಜಿಲ್ಲಾಧ್ಯಕ್ಷರು ಗ್ರಾಮೀಣ ಅವರು, ವಿಧಾನಸೌಧ ಮುಂದೆಯೇ ಪ್ರಶ್ನೆ ಮಾಡಿದರು.

ಅಲ್ಲಿ ಸರ್ಕಾರದ ಆಡಳಿತ ಯಂತ್ರ ಬೀಡು ಬಿಟ್ಟಿತ್ತು. ಆದರೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಬಹು ಸಂಖ್ಯೆಯಲ್ಲಿ ಸೇರಿದ ಆರ್‌ಸಿಬಿ ಅಭಿಮಾನಿಗಳಿಗೆ ಸೂಕ್ತ ಬಿಗಿ ಬಂದೋಬಸ್ತ್ ಕೈಗೊಳ್ಳದೇ ನಿರ್ಲಕ್ಷ್ಯ ತೋರಿರುವುದು ಕಾಂಗ್ರೆಸ್ ಸರ್ಕಾರದ ವೈಫಲ್ಯದ ಪರಿಣಾಮ ಅಲ್ಲಿ ಸಂಭವಿಸಿದ ಕಾಲ್ತುಳಿತ ದುರಂತದಲ್ಲಿ 11 ಜನರು ಸಾವನ್ನಪ್ಪಿದ್ದಾರೆ ಈ ಸಾವಿಗೆ ಡಿಸಿಎಂ ಡಿಕೆಶಿಯೇ ಅವರೇ ನೇರ ಹೊಣೆ ಹೊರಬೇಕು ಎಂದು ಅಶೋಕ್ ಬಗಲಿ ಬಿಜೆಪಿ ಜಿಲ್ಲಾಧ್ಯಕ್ಷರು ಗ್ರಾಮೀಣ ಅವರು ಆಗ್ರಹಿಸಿದ್ದಾರೆ.

# ನಮ್ಮ ಸಮಾಜ ಸಾಹಿತ್ಯ, ಸಂಸ್ಕೃತಿ ಬೆಳೆಸುವ ಹೃದಯ ಶ್ರೀಮಂತಿಕೆ ಹೊಂದಿದೆ: ಪಾಪರೆಡ್ಡಿ



**ಯುವ ಮಾರ್ಗ ಸುದ್ದಿ**

**ರಾಯಚೂರು,ಜೂ.7–**ಮುನ್ನೂರು ಕಾಪು ಸಮಾಜದಲ್ಲಿ ಕವಿಗಳು ಹಾಗೂ ಸಾಹಿತಿಗಳು ಇಲ್ಲ ಆದರೆ ಸಾಹಿತಿ ಕವಿಗಳನ್ನು ಪ್ರೋತ್ಸಾಹಿಸುವ ಹೃದಯವಂತಿಕೆ ಮುನ್ನೂರು ಕಾಪು ಸಮಾಜ ಹೊಂದಿದೆ ಎಂದು ಮುನ್ನೂರು ಕಾಪು ಸಮಾಜದ ಹಿರಿಯ ಮುಖಂಡರು ಮಾಜಿ ಶಾಸಕರು ಹಾಗೂ ಹಬ್ಬದ ರೂವಾರಿ ಎ.ಪಾಪಾರೆಡ್ಡಿ ಅವರು ಹೇಳಿದರು.

ಶನಿವಾರ ನಗರದ ವೀರಾಂಜನೇಯ ಕಲ್ಯಾಣ ಮಂಟಪದಲ್ಲಿ ಮುಂಗಾರು ಸಾಂಸ್ಕೃತಿಕ ರಾಯಚೂರು ಬೆಳ್ಳಿ ಮಹೋತ್ಸವ ಅಂಗವಾಗಿ ವಿಶೇಷ ಕಾರ್ಯಕ್ರಮ ಮುಂಗಾರು ಗೀತ ಕುಂಚ ಗಾಯನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸಮಾಜದವರು ವ್ಯಾಪಾರಸ್ಥರಾಗಿ ಗುರುತಿಸಿ ಕೊಂಡಿದ್ದಾರೆ.ಆದರೆ ಈ ಭಾರಿ ಮುಂಗಾರು ಬೆಳ್ಳಿ ಹಬ್ಬದ ಹಿನ್ನಲೆ ಸಾಹಿತಿ ಹಾಗೂ ಕವಿಗಳನ್ನು ಒಂದೇ ವೇದಿಕೆಯಲ್ಲಿ ಗುರುತಿಸುವ ಮೂಲಕ ಅವರನ್ನು ಪ್ರೋತ್ಸಾಹಿಸುವ ಕೆಲಸ ಸಮಾಜದಿಂದ ನಿರಂತರವಾಗಿ ಮಾಡುತ್ತಿದೆ. ಸಾಹಿತಿ ಹಾಗೂಕವಿಗಳು ಕಲಾವಿದರು ಕೇವಲ ಬೆಂಗಳೂರು ಮೈಸೂರು ಭಾಗದಲ್ಲಿ ಮಾತ್ರವಲ್ಲ ಕಲ್ಯಾಣ ಭಾಗದ ರಾಯಚೂರು ಜಿಲ್ಲೆಯಲ್ಲಿ ಹಿರಿಯ ಸಾಹಿತಿ ಹಾಗೂ ಕವಿಗಳು ಇದ್ದಾರೆ ಅವರನ್ನು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಅವರನ್ನು ಪ್ರೋತ್ಸಾಹಿಸುವ ಕೆಲಸ ಎಲ್ಲಾ ಸಮುದಾಯದಿಂದ ನಿರ್ವಹಿಸುವುದು ಅಗತ್ಯವಿದೆ. ಮುಂಗಾರು ಬೆಳ್ಳಿ ಹಬ್ಬದ ಪ್ರಯುಕ್ತ 8 ದಿನಗಳ ವೈದ್ಯಮಯ್ಯ ಕಾರ್ಯಕ್ರಮ ನಿರ್ವಹಣೆಯೊಂದಿಗೆ ಸಾಹಿತಿಗಳಿಗೆ ಮೂರು ದಿನ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸ ಲಾಗಿದೆ. ಮುಂಗಾರು ಸಾಂಸ್ಕೃತಿಕ ರಾಯಚೂರು ಬೆಳ್ಳಿ ಪ್ರಯುಕ್ತ ಸಾಹಿತಿಗಳು ಕವಿಗಳು ಹಾಗೂ ಕಲಾವಿದರನ್ನು ಗೀತ ಕುಂಚ ಗಾಯನದ ಮೂಲಕ ಅವರಿಗೆ ಉತ್ತಮ ವೇದಿಕೆ ಕಲ್ಪಿಸಲಾಗಿದೆ.ಕೆ ಸತ್ಯನಾರಾಯಣ ಹಾಗೂ ಸಾಹಿತಿ ವೀರ ಹನುಮಾನ್ ಅವರ ಸಲಹಾ ಸೂಚನೆ ಮೇರೆಗೆ ಈ ಬಾರಿ ಬೆಳ್ಳಿ ಹಬ್ಬದ ಹಿನ್ನಲೆ ಗುರುತಿಸುವ ಮುನ್ನೂರು ಕಾಪು ಸಮಾಜದ ಮಾಡುತ್ತಿದೆ. ಜಿಲ್ಲೆ, ಎಲ್ಲಾ ಸಮುದಾಯದ ಜನರು ಇಂತಹ ಸಾಂಸ್ಕೃತಿಕ ಕಾರ್ಯಕ್ರಮ ವನ್ನು ನಿರ್ವಹಿಸುವ ಮೂಲಕ ಸಾಹಿತಿಗಳಿಗೆ ಪ್ರೋತ್ಸಾಹಿಸುವ ಆಗಬೇ ಕು. ಅದಕ್ಕೆ ನಮ್ಮ ಸಮಾಜದ ಬೆಂಬಲವೂ ಇರು ತ್ತದೆ ಎಂದರು. 25ನೇ ವರ್ಷದ ಮುಂಗಾರು ಸಾಂಸ್ಕೃತಿಕ ರಾಯಚೂರು ಬೆಳ್ಳಿ ಹಬ್ಬ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆಯುವ ನಿಟ್ಟಿನಲ್ಲಿ ಅಯೋಜಿ ಸಲಾಗಿದೆ. ನಂತರ ಹಿರಿಯ ಸಾಹಿತಿ ಬಿ.ಜಿ.ಹುಲಿ ಅವರು ಮಾತನಾಡಿ, ಮುಂಗಾರು ಬೆಳ್ಳಿ ಹಬ್ಬದ ಮೂಲಕ ಕವಿಗಳಿಗೆ ಹಾಗೂ ಕಲಾವಿದರಿಗೆ ಉತ್ತಮ ವೇದಿಕೆ ಕಲ್ಪಿಸಿರುವ ಮುನ್ನೂರು ಕಾಪು ಸಮಾಜ ಮುಂಗಾರು ಗೀತ ಕುಂಚ ಗಾಯನ ಆಯೋಜನೆಯಿಂದ ಶ್ರೀಮಂತಿಕೆ ಹೊಂದಿದೆ ಎಂದರು. 25ನೇ ವರ್ಷದ ಮುಂಗಾರು ಸಾಂಸ್ಕೃತಿಕ ರಾಯಚೂರು ಬೆಳ್ಳಿ ಹಬ್ಬವನ್ನು ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿಸುಕೊ ಳ್ಳುವ ಪೂರ್ವ ಅಂಗವಾಗಿ ಆಯೋಜಿಸುವ ಮುಂಗಾರು ಸಾಂಸ್ಕೃತಿಕ ಕಾರ್ಯಕ್ರಮ ಆಚರಿ ಸಲಾಗುತ್ತದೆ. ಗೀತ ಎಂದರೆ ಹಾಡು ಕುಂಚ ಎಂದರೆ ಬಣ್ಣ ಗಾಯನ ಕಂಠ ಮೂರು ಅಂಶ ಗಳ ಮೂಲಕ ಸಂಗೀತದಲ್ಲಿ ಸಾಹಿತ್ಯ ಅಡಗಿ ಕೊಂಡಿದೆ ಎಂದರು.

ಈ ಸಂದರ್ಭದಲ್ಲಿ ಹಬ್ಬದ ರೂವಾರಿ ಎ. ಪಾಪಾರೆಡ್ಡಿ, ಸಮಾಜದ ಅಧ್ಯಕ್ಷ ಬೆಲ್ಲಂ ನರಸರೆಡ್ಡಿ,ಖ್ಯಾತ ಹಿರಿಯ ಸಾಹಿತಿ ಪಿಜಿ ಹುಲಿ, ಬಾಬು ಭಂಡಾರಿಗಲ್, ಕೃಷ್ಣಮೂರ್ತಿ, ಕೆ. ಸತ್ಯನಾರಾಯಣ, ಜಿ.ವೆಂಕಟರೆಡ್ಡಿ, ಜಿ.ಶೇಖರರೆಡ್ಡಿ, ಪುಂಡ್ಲ ರಾಜೇಂದ್ರ ರೆಡ್ಡಿ, ಲಿಂಗರೆಡ್ಡಿ, ಬಂಗಿ ಮುನಿರೆಡ್ಡಿ, ಮುನ್ನೂರು ಕಾಪು ಸಮಾಜದ ಮುಖಂಡರು ಸೇರಿದಂತೆ ಇದ್ದರು.

# ಪೊಲೀಸ್ ಆಯುಕ್ತ ದಯಾನಂದ್ ಅವರ ಅಮಾನತು ಖಂಡನಿಯ



**ಯುವ ಮಾರ್ಗ ಸುದ್ದಿ**

**ರಾಯಚೂರು, ಜೂ.7–** ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ. ದಯಾನಂದ ಅವರ ಮೇಲೆ ಆರೋಪಿಸಲಾಗಿರುವ ದುರ್ನಡತೆ ಮತ್ತು ಅದರ ಪರಿಣಾಮವಾಗಿ ಅವರನ್ನು ಅಮಾನತುಗೊಳಿಸಿರುವುದನ್ನು ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಹಿತರಕ್ಷಣಾ ಸಂಘ ತೀವ್ರವಾಗಿ ಖಂಡಿಸಿದೆ. ಅವರ ಅಮಾನತು ಸಂಪೂರ್ಣವಾಗಿ ಅಸಮರ್ಥನೀಯವಾಗಿದ್ದು, ಅವರನ್ನು ತಕ್ಷಣವೇ ಕರ್ತವ್ಯಕ್ಕೆ ಮರುಸ್ಥಾಪಿಸಬೇಕು ಎಂದು ಸಂಘ ಆಗ್ರಹಿಸಿದೆ.

ಸಂಘದ ರಾಜ್ಯ ಅಧ್ಯಕ್ಷ ವೈ. ಹನುಮಂತಪ್ಪ ನಾಯಕ್ ಅವರು ಶನಿವಾರ ರಾಯಚೂರಿನ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಹೇಳಿಕೆ ನೀಡಿದರು. ಇತ

18 ವರ್ಷಗಳ ನಂತರ ಆರ್‌ಸಿಬಿ ಐಪಿಎಲ್ ಕ್ರಿಕೆಟ್ ಟೂರ್ನಮೆಂಟ್ ಗೆದ್ದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಜೂನ್ 4 ರಂದು ಈ ಘಟನೆ ನಡೆದಿದೆ. ಪೊಲೀಸ್ ಇಲಾಖೆಯು ಆರಂಭದಲ್ಲಿ ವಿಜಯೋತ್ಸವದ ಮೆರವಣಿಗೆಯನ್ನು ಜೂನ್ 8 ರಂದು ನಡೆಸುವಂತೆ ಸಲಹೆ ನೀಡಿತ್ತು. ಆದರೆ, ಸರ್ಕಾರ ಈ ಸಲಹೆಯನ್ನು ನಿರ್ಲಕ್ಷಿಸಿ, ಗೆದ್ದ ಮರುದಿನವೇ ಕಾರ್ಯಕ್ರಮವನ್ನು ಆಯೋಜಿಸಿತು. ಇದು ಭಾರೀ ಜನಸಮೂಹವನ್ನು ನಿಯಂತ್ರಿಸಲು ಗಂಭೀರ ತೊಂದರೆಗಳನ್ನು ಉಂಟುಮಾಡಿತು. ಚಿನ್ನಸ್ವಾಮಿ ಕ್ರೀಡಾಂಗಣವು ಕೇವಲ 30,000 ಆಸನ ಸಾಮರ್ಥ್ಯವನ್ನು ಹೊಂದಿದ್ದರೂ, 6 ಲಕ್ಷಕ್ಕೂ ಹೆಚ್ಚು ಅಭಿಮಾನಿಗಳು ಸೇರಿದ್ದರಿಂದ ಗೊಂದಲದ ಪರಿಸ್ಥಿತಿ ನಿರ್ಮಾಣವಾಗಿ, ಬಹುತೇಕ ಕಾಲ್ತುಳಿತದಂತಹ ವಾತಾವರಣ ಉಂಟಾಯಿತು.

ಈ ಅವ್ಯವಸ್ಥೆಯ ಪರಿಣಾಮವಾಗಿ, 11 ಕ್ರಿಕೆಟ್ ಅಭಿಮಾನಿಗಳು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ನಾಯಕ್ ತಿಳಿಸಿದರು. ಪೊಲೀಸ್ ಇಲಾಖೆಯು ಸಕಾಲಿಕ ಮತ್ತು ಸೂಕ್ತ ಸಲಹೆಯನ್ನು ನೀಡಿದ್ದರೂ, ಸರ್ಕಾರ ಅದನ್ನು ಪಾಲಿಸದೆ ನಿರ್ಲಕ್ಷಿಸಿತು. ಸರ್ಕಾರದ ಈ ನಿರ್ಧಾರದ ಪರಿಣಾಮವಾಗಿ ಉಂಟಾದ ಪರಿಸ್ಥಿತಿಗೆ ಪೊಲೀಸ್ ಆಯುಕ್ತರನ್ನು ಹೊಣೆಗಾರರನ್ನಾಗಿ ಮಾಡಿ ಅವರನ್ನು ವರ್ಗಾವಣೆ ಮಾಡಿರುವುದು ಅಸಮರ್ಥನೀಯ ಎಂದು ಅವರು ಬಲವಾಗಿ ವಾದಿಸಿದರು.

ಈ ಹಿನ್ನೆಲೆಯಲ್ಲಿ, ಬಿ. ದಯಾನಂದ ಅವರ ವರ್ಗಾವಣೆ ಆದೇಶವನ್ನು ತಕ್ಷಣವೇ ರದ್ದುಗೊಳಿಸಿ ಅವರನ್ನು ಕರ್ತವ್ಯಕ್ಕೆ ಮರುಸ್ಥಾಪಿಸುವಂತೆ ವೈ. ಹನುಮಂತಪ್ಪ ನಾಯಕ್ ಸರ್ಕಾರವನ್ನು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಇತರ ಪದಾಧಿಕಾರಿಗಳಾದ ವೀರೇಶ್ ನಾಯಕ್, ಹುಸೇನಪ್ಪ ನಾಯಕ್ ಮತ್ತು ರಂಗಪ್ಪ ನಾಯಕ್ ಉಪಸ್ಥಿತರಿದ್ದರು.

# ಸದ್ಯದಲ್ಲೇ ಗೃಹಲಕ್ಷ್ಮೀ ಹಣ ಫಲಾನುಭವಿಗಳ ಖಾತೆಗೆ



**ರಾಯಚೂರು,ಜೂ.07–**ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಮಹಿಳಾ ಗೃಹಲಕ್ಷ್ಮೀ ಯೋಜನೆಯಡಿ ರಾಯಚೂರು ಜಿಲ್ಲೆಯ ಅರ್ಹ 2,58,399 ಫಲಾನುಭವಿಗಳಿಗೆ 2025–26ನೇ ಸಾಲಿನ ಎರಡನೇ ಕಂತಿನ 51,67,98,000 5. ಮೊತ್ತವನ್ನು ಡಿಬಿಟಿ ಮೂಲಕ ಚಾಲ್ತಿ ಮಾಡಲಾಗಿದ್ದು,

ಮುಂದಿನ ಎರಡು ಮೂರು ದಿನಗಳಲ್ಲಿ ಫಲಾನುಭವಿಗಳ ಖಾತೆಗೆ ಹಣ ಜಮಾ ಆಗಲಿದೆ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರು ತಿಳಿಸಿದ್ದಾರೆ.

ಗೃಹಲಕ್ಷ್ಮೀ ಯೋಜನೆಯಡಿ ಜಿಲ್ಲೆಯ ಅರ್ಹ ಫಲಾನುಭವಿಗಳಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಮೂಲಕ ಡಿಬಿಟಿ ಪ್ರಕ್ರಿಯೆ ಚಾಲ್ತಿ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

# ಕನ್ನಡಕ್ಕೆ ಮಾಸ್ತಿಯವರು ಅಮೂಲ್ಯ ಆಸ್ತಿ



**ಕಲಬುರಗಿ:ಜೂ.7–**ವಿಶ್ವದ ಪ್ರಮುಖ ಭಾಷೆಗಳಲ್ಲಿ ಸ್ಥಾನ ಪಡೆಯುವಲ್ಲಿ ಶ್ರಮಿಸಿದ, ಕನ್ನಡ ಭಾಷೆ ಸಾಹಿತ್ಯ, ಕಲೆ, ಸಂಸ್ಕೃತಿಗೆ ತಮ್ಮದೇ ಆದ ಅಮೂಲ್ಯವಾದ ಕೊಡುಗೆಯನ್ನು ನೀಡಿ, ಕನ್ನಡ ಸಾಹಿತ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ದೊರಕಿಸಿಕೊಟ್ಟ ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರು ಕನ್ನಡದ ಅಮೂಲ್ಯವಾದ ಆಸ್ತಿಯಾಗಿದ್ದಾರೆ ಎಂದು ಗುವಿವಿ ವಿಶ್ರಾಂತ ಪ್ರಾಧ್ಯಾಪಕ, ಸಾಹಿತಿ ಡಾ.ವಾಸುದೇವ ಸೇಡಂ ಎಚ್. ಹೇಳಿದರು.

ನಗರದ ಹೊಸ ಜೇವರ್ಗಿ ರಸ್ತೆಯ 'ಗೆಟ್ಸ್ ಡಿಗ್ರಿ ಕಾಲೇಜ್'ನಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಹಮ್ಮಿಕೊಂಡಿದ್ದ 'ಮಾಸ್ತಿ ವೆಂಕಟೇಶ ಅಯ್ಯಂಗಾರ್'ರ 134ನೇ ಜನ್ಮದಿನಾಚರಣೆ'ಯ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನಗಳನ್ನು ಸಲ್ಲಿಸಿ ಅವರು ಮಾತನಾಡುತ್ತಿದ್ದರು.

ಉಪನ್ಯಾಸಕ, ಲೇಖಕ ಎಚ್.ಬಿ.ಪಾಟೀಲ ಮಾತನಾಡಿ, ಮಾಸ್ತಿಯವರ 'ಕೆಲವು ಸಣ್ಣ ಕಥೆಗಳು' ಎಂಬ ಪ್ರಥಮ ಕೃತಿಯು 1920ರಲ್ಲಿ ಪ್ರಕಟವಾಯಿತು. ಇದು ಆಧುನಿಕ ಕನ್ನಡದ ಸಾಹಿತ್ಯದ ವಿಶಿಷ್ಟವಾದ ಮೊದಲ ಕೃತಿಯೆನಿಸಿದೆ. ಹಾಗೆ ನೋಡಿದರೆ ಸಣ್ಣಕಥೆಯನ್ನು ಮೊದಲು ಬರೆದವರು ಮಾಸ್ತಿಯವರಲ್ಲದೇ ಇದ್ದರೂ ಕೂಡಾ, ಕಥೆಗಳಿಗೆ ಮತ್ತು ಮಾಸ್ತಿಯವರಿಗೆ ಅನೋನ್ಯವಾದ ಬಾಂಧವ್ಯವಿದೆ. ಆದ್ದರಿಂದಲೇ ಇವರು ಕನ್ನಡ ಕಥಾ ಸಾಹಿತ್ಯದ ಪ್ರಮುಖರೆನಿಸಿಕೊಂಡು, 'ಕನ್ನಡದ ಆಸ್ತಿ'ಯಾಗಿ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದ್ದಾರೆ. ಮಾಸ್ತಿಯವರ ಸಣ್ಣ ಕಥೆಗಳ ಭಾಷೆ, ನಿರೂಪಣಾ ಶೈಲಿ, ಜೀವನದ ನಿಶ್ಚಳ ಅನುಭವಗಳು ತುಂಬಾ ಸರಳವಾಗಿದ್ದು, ಎಂತಹ ಓದುಗರನ್ನು ತನ್ನೊಳಗೆ ಆವರಿಸಿಕೊಳ್ಳುವಂತೆ ಮಾಸ್ತಿಯವರ ಸಾಹಿತ್ಯ ಹೊಂದಿದೆ ಎಂದರು.

ಮಾಸ್ತಿಯವರ ಕುರಿತು ಕುವೆಂಪು ಅವರು 'ಮಾಸ್ತಿಯವರ ಸಾಹಿತ್ಯ ದೊಡ್ಡದು. ಅವರು ಅದಕ್ಕಿಂತಲೂ ದೊಡ್ಡವರೆಂಬ ನನ್ನ ಭಾವನೆ' ಎಂದಿರುವ ಮಾತು ಮಾಸ್ತಿಯವರ ಮೇರು ವ್ಯಕ್ತಿತ್ವವನ್ನು ತೋರಿಸುತ್ತದೆ. ಕನ್ನಡ ಸಾಹಿತ್ಯ, ಭಾಷೆಗೆ ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರು ನೀಡಿರುವ ಕೊಡುಗೆ ಬಹು ಮೌಲ್ಯಯುತವಾಗಿದೆ. ಅವರೊಬ್ಬ ಕನ್ನಡ ಸಾರಸತ್ವ ಲೋಕದ ಮೇರು ಸಾಹಿತಿಯಾಗಿದ್ದಾರೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಬಿ.ಕಂಟೆಗೋಳ್, ಉಪನ್ಯಾಸಕ ಶಿವಲಿಂಗಪ್ಪ ತಳವಾರ, ಸಿಬ್ಬಂದಿ ಭರತ ಮಾಗೋಂಡ್, ಪ್ರಮುಖರಾದ ಜಯತೀರ್ಥ ರಾಯಚೂರ್, ಅಮಿತ್ ಶಹಾಪುರ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

# ಮಲೆ ಮಹದೇಶ್ವರ ಬೆಟ್ಟದಲ್ಲಿ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ: ಜಿಲ್ಲಾ ಉಸ್ತುವಾರಿ ಸಚಿವರಿಗೆ ಆಹ್ವಾನ

**ಬೆಂಗಳೂರು,ಜೂ.7–**ಚಾಮರಾಜನಗರ ಜಿಲ್ಲೆ ಮಲೆಮಹದೇಶ್ವರ ಬೆಟ್ಟದಲ್ಲಿ ಜೂನ್ 21ರಂದು ಶನಿವಾರ ನಡೆಯಲಿರುವ, ಪತ್ರಕರ್ತರ ಮಕ್ಕಳ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ

ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ವೆಂಕಟೇಶ್ ಅವರನ್ನು ವಿಧಾನಸೌಧದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಭೇಟಿ ಮಾಡಿ ಆಹ್ವಾನಿಸಿದರು.ಚಾಮರಾಜನಗರ



ಜಿಲ್ಲ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಹನೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಆಶ್ರಯದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದು ಸಚಿವರಿಗೆ ವಿವರ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಕಾರ್ಯಕ್ರಮಕ್ಕೆ ಎಲ್ಲಾ ರೀತಿಯ ಸಹಕಾರ ನೀಡಲು ಜಿಲ್ಲಾಡಳಿತಕ್ಕೆ ಸೂಚನೆ ನೀಡುವುದಾಗಿ ತಿಳಿಸಿದರು. ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅಂದು ತಾವು ಕೂಡ ಭಾಗವಹಿಸುವುದಾಗಿಯೂ ತಿಳಿಸಿದರು.

Owned, Printed and published by **ANILKUMAR H** from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at **MAA FRIENDS PRINTING PRESS,** Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: **ANILKUMAR H**